ಜನಮನದ ದನಿ

# ಪ್ರಜೋದಯ

ಸಂಪಾದಕ : ಜೆ.ಆರ್. ಕೆಂಚೇಗೌಡ



ಭಾರತ ತಂಡಕ್ಕಾಗಿ ಯಾವುದೇ ಕ್ರಮಾಂಕದಲ್ಲಿ ಬೇಕಾದರೂ ನಾನು ಬ್ಯಾಟಿಂಗ್‌ಗೆ ಬರಲು ಸಿದ್ಧನಿದ್ದೇನೆ ಎಂದು ಬ್ಯಾಟರ್ ತಿಲಕ್ ವರ್ಮಾ ಹೇಳಿದ್ದಾರೆ.

14 ಡಿಸೆಂಬರ್ 2025 ಭಾನುವಾರ ಬೆಲೆ ₹ 2.00 ಸಂಪುಟ : 19 ಸಂಚಿಕೆ : 272 | ಪುಟ-4 | ಹಾಸನ | E-mail : prajodayahsn@gmail.com | RNI NO: KARKAN/2007/22629



ನಮ್ಮೂರ ಒಬೆರಾಯ್, ಗೋಪಾಡಿ ಶ್ರೀನಿವಾಸ ರಾವ್! » 2



ರೆಸ್ಟೋರೆಂಟ್‌ಗಳಿಗೆ ಸ್ಟಾರ್ ಪಟ್ಟ ಕೊಡುವ ಟೈರ್ ಕಂಪೆನಿ » 3



ಸಾಮಾನ್ಯ ಜ್ಞಾನ ನೀಡಿದರೆ ಕಲಿಕೆಯ ಗುಣಮಟ್ಟ ಹೆಚ್ಚಳ » 4

# ನಾಯಕತ್ವ ಗುದ್ದಾಟ: ಇಂದು ದೆಹಲಿಗೆ ನಾಯಕರು

## ವರಿಷ್ಠರೊಂದಿಗೆ ಚರ್ಚೆ ಸಾಧ್ಯತೆ | ಜ.6ಕ್ಕೆ ಡಿ.ಕೆ.ಶಿ. ಸಿ.ಎಂ.-ಇಕ್ಬಾಲ್ ಹುಸೇನ್

• ಪ್ರಜೋದಯ ವರದಿ

**ಬೆಂಗಳೂರು:** ಹೈಕಮಾಂಡ್ ನಿರ್ದೇಶನದ ಬಳಿಕ ಮುಖ್ಯಮಂತ್ರಿ ಹಾಗು ಉಪಮುಖ್ಯ ಮಂತ್ರಿ ಅವರ ಬ್ರೇಕ್ ಫಾಸ್ಟ್ ಮೀಟಿಂಗ್ ಬಳಿಕ ತಣ್ಣಗಾಗಿದ್ದ ನಾಯಕತ್ವ ಗುದ್ದಾಟ ಮತ್ತೊಂದು ಹಂತಕ್ಕೆ ತಲುಪಿದ್ದು, ಡಿ.ಕೆ.ಶಿವಕುಮಾರ್ ಅವರ ಆಪ್ತ ಬಣದ ಶಾಸಕ ಇಕ್ಬಾಲ್ ಹುಸೇನ್ ಅವರು ಜ.6ಕ್ಕೆ ಮುಖ್ಯಮಂತ್ರಿ ಬದಲಾವಣೆ ಖಚಿತ ಎಂದಿರುವುದು ಸಂಚಲನ ಸೃಷ್ಟಿಸಿದೆ.

ರಾಮನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಡಿ.ಕೆ.ಶಿವ ಕುಮಾರ್ ಅವರನ್ನು ಮುಖ್ಯಮಂತ್ರಿ ಮಾಡುವುದೇ ನಮ್ಮ ಗುರಿ. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಹುದ್ದೆಯನ್ನು ಬಿಟ್ಟು ಕೊಡ ಬೇಕು. ಡಿ.ಕೆ.ಶಿ.ಗೆ ಅವಕಾಶ ಸಿಗಬೇಕು. ಅದಕ್ಕೆ ಹೈಕಮಾಂಡ್ ಸ್ಪಂದಿಸುತ್ತಿದೆಯೆಂದು ವಿಶ್ವಾಸ ವ್ಯಕ್ತಪಡಿಸಿದರು.

ಆ ದಿನಾಂಕದ ಮಹತ್ವವೇನೆಂಬ ಪ್ರಶ್ನೆಗೆ ಉತ್ತರಿಸಿ, ಶಿವಕುಮಾರ್ ಅವರಿಗೆ ಜ.6 ಮತ್ತು 9 ಅದೃಷ್ಟ ಸಂಖ್ಯೆ. ನಮ್ಮಲ್ಲಿ ಯಾವುದೇ ಬಣ ಇಲ್ಲ. ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಇಬ್ಬರೂ ರಾಜ್ಯದ ಆಸ್ತಿ. ಶಿವಕುಮಾರ್ ಅವರ ಹೋರಾಟ, ಶ್ರಮಕ್ಕೆ ಪ್ರತಿಫಲ ಸಿಗಬೇಕೆನ್ನುವುದು ನಮ್ಮ ಬೇಡಿಕೆ. ಯಾರು ಏನೇ ಹೇಳಿಕೊಳ್ಳಲಿ. ರಾಜ್ಯದ ಜನರು ಹಾಗು ಈ ಭಾಗದ ಶಾಸಕರು ಶಿವಕುಮಾರ್‌ಗೆ ಅವರಿಗೆ ಅವಕಾಶ ಕೊಡಿ



ಎಂದು ಕೇಳಿದ್ದೇವೆ. ನಮ್ಮ ಪ್ರಾರ್ಥನೆ ಶೀಘ್ರ ಈಡೇರುತ್ತದೆಂದರು. ಮತ್ತೊಂದೆಡೆ ಶಾಸಕ ಇಕ್ಬಾಲ್ ಹುಸೇನ್ ಅವರ ಹೇಳಿಕೆಯನ್ನು ಖಂಡಿಸಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು, ಹುಸೇನ್ ಮಾತನ್ನು ಯಾರೂ ನಂಬಬೇಡಿ, ಅವನಿಗೆ ಮಾತಾಡುವ ಚಟವಿದೆ. ಅವನ ವಿರುದ್ಧ ಕ್ರಮ ತೆಗೆದು ಕೊಳ್ಳುತ್ತೇನೆಂದು ಸಿಡಿಮಿಡಿಗೊಂಡರು.

ಚುನಾವಣಾ ಆಯೋಗ ವಿರುದ್ಧ ಮತಗಳ್ಳತನ ಪ್ರತಿಭಟನೆಯಲ್ಲಿ ಭಾಗವಹಿಸಲು ದೆಹಲಿಗೆ ಹೋಗುತ್ತಿದ್ದೇನೆ. 100ಕ್ಕೂ ಹೆಚ್ಚು ಶಾಸಕರು, ಬ್ಲಾಕ್ ಅಧ್ಯಕ್ಷರು, ಕಾರ್ಯಕರ್ತರು ಹಾಜರಾ ಗುವಂತೆ ನಾವು ಕೇಳಿಕೊಂಡಿದ್ದೇವೆ. ಇದು ರಾಷ್ಟ್ರವ್ಯಾಪಿ ಪ್ರತಿಭಟನೆಯಾಗಿರುತ್ತದೆಂದರು.

ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಿಂದ ಚಳವಳಿ ಪ್ರಾರಂಭವಾಯಿತು. ನಾವು ಮತ ದಾನದ ಹಕ್ಕಿಗಾಗಿ ಹೋರಾಡುತ್ತೇವೆ. ಕಾಂಗ್ರೆಸ್ ಪಕ್ಷಯಾವಾಗಲೂ ಪ್ರಜಾಪ್ರಭುತ್ವ ಮತ್ತು ಸಂವಿಧಾನದ ಪರವಾಗಿ ನಿಂತಿದೆ. ಇಲ್ಲಿ ಪ್ರತಿಯೊಬ್ಬ ನಾಗರಿಕನ ಮತವು ಮುಖ್ಯವಾಗಿದೆ. ಆದ್ದರಿಂದ ಮತ ರಕ್ಷಣೆಗಾಗಿ ಹೋರಾಟ ಕೈಗೊಳ್ಳಲಾಗಿದೆ. ಹೈಕಮಾಂಡ್ ಭೇಟಿ ಮಾಡುವ ಯಾವ ಉದ್ದೇಶವಿಲ್ಲ. ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ನನಗೆ ಬಂದಿರುವ ನೋಟೀಸ್‌ಗೆ ದೆಹಲಿ ಪೊಲೀಸರಿಗೆ ಉತ್ತರ ಕೊಡಬೇಕಾಗಿದೆ ಎಂದರು.

**ದೆಹಲಿ ಭೇಟಿ ಕುತೂಹಲ**

ರಾಜ್ಯದಲ್ಲಿ ನಾಯಕತ್ವ ಬದಲಾವಣೆಯ ಬಿಸಿ ಚರ್ಚೆಗಳ ನಡುವೆ ಮುಖ್ಯಮಂತ್ರಿ ಸಿದ್ದ ರಾಮಯ್ಯ ಹಾಗು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ದೆಹಲಿ ಪ್ರವಾಸ ಕೈಗೊಂಡಿದ್ದು ಕುತೂಹಲ ಕೆರಳಿಸಿದೆ.

ದೇಶದ ಹಲವು ರಾಜ್ಯಗಳಲ್ಲಿ ನಡೆದಿದೆ ಎನ್ನಲಾದ ಮತಗಳ್ಳತನ ವಿರೋಧಿಸಿ ಡಿ.14ರ ಭಾನುವಾರ ದೆಹಲಿಯ ರಾಮಲೀಲಾ ಮೈದಾನದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ. ಈ ಕಾರ್ಯ ಕ್ರಮದಲ್ಲಿ ಇಬ್ಬರೂ ನಾಯಕರು ಪಾಲ್ಗೊಳ್ಳಲಿದ್ದು ಮುಖ್ಯಮಂತ್ರಿ ಬದಲಾವಣೆ ವಿಚಾರವಾಗಿ ಮಾತುಕತೆ ನಡೆಯಬಹುದು ಎನ್ನಲಾಗಿದೆ.

ಜೊತೆಗೆ ಡಿ.ಕೆ.ಶಿವಕುಮಾರ್ ಬಣದ ಶಾಸಕರು ದೆಹಲಿ ಪ್ರವಾಸ ಕೈಗೊಂಡಿದ್ದಾರೆ. ಸಚಿವ ಎನ್.ಚಲುವರಾಯಸ್ವಾಮಿ ನೇತೃತ್ವದಲ್ಲಿ ತಂಡ ದೆಹಲಿಗೆ ತೆರಳುವ ಸೂಚನೆ ಇತ್ತು. ಅನಾರೋಗ್ಯದ ಕಾರಣ ಚಲುವರಾಯಸ್ವಾಮಿ ದೆಹಲಿಗೆ ಹೋಗುತ್ತಿಲ್ಲ. ಶಾಸಕರಾದ ದಿನೇಶ್ ಗೂಳಿಗೌಡ, ರವಿಕುಮಾರ್ ಗಣಿಗ ದೆಹಲಿಗೆ ತೆರಳಿದ್ದಾರೆ.

### ಪರಮೇಶ್ವರ್ ಪರ ಸೋಮಣ್ಣ ಒಲವು

ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಅವರು, ಗೃಹ ಸಚಿವ ಜಿ.ಪರಮೇಶ್ವರ್ ರಾಜ್ಯದ ಮುಖ್ಯಮಂತ್ರಿಯಾಗಲಿ ಎಂದು ಆಶಿಸಿದ್ದಾರೆ. ಅಧಿಕಾರ ಪಡೆಯುವುದು ಅದೃಷ್ಟ. ಪರಮೇಶ್ವರ್ ಅವರು ಗೃಹ ಸಚಿವರಾಗಿಯೇ ಉಳಿ ಯುತ್ತಾರೆಂದು ನಾನು ಭಾವಿಸುವುದಿಲ್ಲ. ಅವರನ್ನು ಮುಖ್ಯಮಂತ್ರಿಯಾಗಿ ನೋಡುವುದು ನಮ್ಮ ಆಸೆ. ನನಗಷ್ಟೇ ಅಲ್ಲ, ತುಮಕೂರಿನ ಜನರಿಗೂ ಅವರನ್ನು ಮುಖ್ಯಮಂತ್ರಿಯಾಗಿ ಕಾಣುವ ಆಸೆ ಇದೆ. ಡಿ.ಕೆ.ಶಿವಕುಮಾರ್ ಏನಾಗುತ್ತಾರೆನ್ನುವುದನ್ನು ಬಿಡಿ. ಅವರು ಏನಾಗಲು ಬಯಸುತ್ತಾರೆಂಬುದು ಅವರ ಅದೃಷ್ಟವನ್ನು ಅವಲಂಬಿಸಿರುತ್ತದೆಂದು ಸೋಮಣ್ಣ ಕಾರ್ಯಕ್ರಮವೊಂದರಲ್ಲಿ ಹೇಳಿದರು.

# ಹಳೇಬೀಡಿನಲ್ಲಿ ಶಾಂತಲಾ ಮಹೋತ್ಸವ

• ಪ್ರಜೋದಯ ವರದಿ




**ಹಾಸನ:** ಬೇಲೂರು ತಾಲ್ಲೂಕಿನ ಹಳೇಬೀಡು ಕರ್ನಾಟಕ ಪಬ್ಲಿಕ್ ಶಾಲಾ ಆವರಣದಲ್ಲಿ ಡಿ. 22 ಹಾಗು 23 ರಂದು ಶಾಂತಲಾ ಮಹೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ಮಾಜಿ ಶಾಸಕ ಹಾಗು ಮಹೋತ್ಸವ ಸಮಿತಿ ಅಧ್ಯಕ್ಷ ಕೆ.ಎಸ್. ಲಿಂಗೇಶ್ ಅವರು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿ, ಮೊದಲ ದಿನ ಮಂಗಳವಾರ ಸಂಜೆ 4 ಗಂಟೆಗೆ ವಿವಿಧ ಕಲಾ ತಂಡಗಳಿಂದ ಅಂಬೇಡ್ಕರ್ ವೃತ್ತದಿಂದ ಹೊಯ್ಸಳೇಶ್ವರ ವೃತ್ತದ ಸಾಂಸ್ಕೃತಿಕ ಮೆರವಣಿಗೆ, ನಂತರ ಸ್ಥಳೀಯ ಕಲಾವಿದರು ಮತ್ತು ಶಾಲಾ-ಕಾಲೇಜು ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿವೆ. ಮಿಮಿಕ್ರಿ ಕಲಾವಿದ ಗೋಪಿ ಅವರು ಹಾಸ್ಯ ವೈಭವ ಹಮ್ಮಿಕೊಳ್ಳಲಾಗಿದೆ. ಪೌರಾಣಿಕ ನಾಟಕ ಪ್ರದರ್ಶನ ಜೊತೆಗೆ ಪುಸ್ತಕ ಬಿಡುಗಡೆ ಸಹ ಇರಲಿದೆಯೆಂದು ತಿಳಿಸಿದರು.

ಕರ್ನಾಟಕ ರಾಜ್ಯ ರೈತ ಸಂಘ, ಹಳೇಬೀಡು ಗ್ರಾಮ ಪಂಚಾಯಿತಿ, ಹೊಯ್ಸಳೇಶ್ವರ ಪ್ರವಾಸೋದ್ಯಮ ಮತ್ತು ಗ್ರಾಮೀಣಾಭಿವೃದ್ಧಿ ಟ್ರಸ್ಟ್, ಹಳೇಬೀಡು ಕನ್ನಡ ಸಾಹಿತ್ಯ ಪರಿಷತ್, ಸ್ತ್ರೀ ಶಕ್ತಿ ಸಹಾಯ ಸಂಘ ಹಾಗು ವಿವಿಧ ಪ್ರಗತಿಪರ ಸಂಘಟನೆಗಳು ಹಾಗು ಸ್ಥಳೀಯ ಮುಖಂಡರು ಮಹೋತ್ಸವದ ಆಯೋಜಕರಾಗಿದ್ದಾರೆಂದರು.

ಡಿ.23 ರಂದು ಆಳ್ವಾಸ್ ಪ್ರತಿಷ್ಠಾನ ಮೂಡಬಿದಿರೆ ಅವರಿಂದ ಆಳ್ವಾಸ್ ಸಾಂಸ್ಕೃತಿಕ ವೈಭವ ನಡೆಯಲಿದೆ. ಕಲಾತ್ಮಕ ಯೋಗ, ಶಾಸ್ತ್ರೀಯ ನೃತ್ಯ-ಅಷ್ಟಲಕ್ಷ್ಮಿ, ಆಂಧ್ರದ ಜನಪದ ಬಂಜಾರ ನೃತ್ಯ, ಬಡಗುತಿಟ್ಟು ಯಕ್ಷಗಾನ-ಶಂಕರಾರ್ಧ ಶರೀರಿಣಿ, ಮಣಿಪುರಿ ಸ್ಟಿಕ್ ಡ್ಯಾನ್ಸ್, ಗುಜರಾತಿನ ಗಾರ್ಭ ಮತ್ತು ದಾಂಡಿಯಾ, ಮಲ್ಲಕಂಬ ಹಾಗು ರೋಪ್ ಕಸರತ್ತು, ಸೃಜನಾತ್ಮಕ ನೃತ್ಯ, ಕಥಕ್ ನೃತ್ಯ-ವರ್ಷಧಾರೆ, ಪುರುಲಿಯಾ ಸಿಂಹ ನೃತ್ಯ, ಯಕ್ಷಗಾನ ಶ್ರೀ ರಾಮ ಪಟ್ಟಾಭಿ ಷೇಕ, ಬೊಂಬೆ ವಿನೋದಾವಳಿ ಸಾಂಸ್ಕೃತಿಕ ವೈಭವದ ವಿಶೇಷತೆಯೆಂದರು.

ಹೊಯ್ಸಳೋತ್ಸವದ ಕೊರಗು ನೀಗಿಸಿ ಸ್ಥಳೀಯ ಹಾಗು ಸುತ್ತಲ ಜನರಿಗೆ ಮನರಂಜನೆ ನೀಡಲು ಶಾಂತಲಾ ಮಹೋತ್ಸವ ನಡೆಸಲಾಗುತ್ತಿದೆ. ಅದಕ್ಕೂ ಮುನ್ನ ರೈತ ದಿನಾಚರಣೆ ನಡೆಯಲಿದೆ. ನಂತರ ಸಾಂಸ್ಕೃತಿಕ ವೈಭವ, ವಸ್ತು ಪ್ರದರ್ಶನ ಇರಲಿದೆ. ಅದಕ್ಕಾಗಿ ಜನರನ್ನು ಕರೆತರಲು ಸಾರಿಗೆ ಬಸ್ ವ್ಯವಸ್ಥೆ ಮಾಡಲಾಗಿದೆಯೆಂದರು.

ಹಳೇಬೀಡು ಪುಷ್ಪಗಿರಿ ಮಠದ ಶ್ರೀ ಸೋಮಶೇಖರ ಸಾನ್ನಿಧ್ಯದಲ್ಲಿ ಶಾಸಕ ಹೆಚ್.ಕೆ.ಸುರೇಶ್ ಮಹೋತ್ಸವ ಉದ್ಘಾಟಿಸಲಿದ್ದಾರೆ. ಕಾಂಗ್ರೆಸ್ ಮುಖಂಡ ರಾದ ಗ್ರಾನೈಟ್ ರಾಜಶೇಖರ್, ವೈ.ಎನ್.ಕೃಷ್ಣೇಗೌಡ, ಜಿಲ್ಲಾಧ್ಯಕ್ಷ ಈ.ಹೆಚ್.ಲಕ್ಷ್ಮಣ್, ಬಿಜೆಪಿ ಮುಖಂಡ ಕೊರಟಿಕೆರೆ ಪ್ರಕಾಶ್ ಭಾಗವಹಿಸಲಿದ್ದಾರೆಂದರು.

ರಾಜ್ಯದ ಬೇರೆ ಬೇರೆ ಕಡೆ ಹಂಪಿ ಉತ್ಸವ, ಮಂಡ್ಯದಲ್ಲಿ ಕಾವೇರಿ ಆರತಿ, ಕಿತ್ತೂರು ಉತ್ಸವ ಮೊದಲಾದ ಉತ್ಸವಗಳು ನಡೆಯುತ್ತಿವೆ. ಹಲವು ಕಾರಣಗಳಿಂದ ಐತಿಹಾಸಿಕ ಹೊಯ್ಸಳೋತ್ಸವಕ್ಕೆ ಗ್ರಹಣ ಇದೆ. ಈ ಸಂಬಂಧ ಅನೇಕ ಸಲ ಜಿಲ್ಲಾಡಳಿತ, ಸರ್ಕಾರಕ್ಕೆ ಮನವಿ ಮಾಡಿದ್ದರೂ ಯಾವ ಪ್ರಯೋಜನ ಆಗಿಲ್ಲ. ಹಾಲಿ ಶಾಸಕರೂ ಪ್ರಯತ್ನ ಮಾಡಿದರೂ ಸಾಧ್ಯವಾಗಿಲ್ಲ. ಅದಕ್ಕಾಗಿ ನಿರ್ಮಿಸಿದ್ದ ಬಿಲ್ಡಿಂಗ್ ಹಾಳಾಗುತ್ತಿದೆಯೆಂದು ಬೇಸರ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಸಮಿತಿ ಸೊಪ್ಪಿನಹಳ್ಳಿ ಶಿವಣ್ಣ, ಶಿವಕುಮಾರ್, ಡಾ.ಎಂ.ಸಿ.ಕುಮಾರ್, ಶಂಕರ್‌ನಾಗ್, ಭಾನುಪ್ರಕಾಶ್ ಇದ್ದರು.

# ಕಾಫಿ ಕಳವು ಮಾಡಿದ್ದ 6 ಜನರ ಬಂಧನ

• ಪ್ರಜೋದಯ ವರದಿ

**ಬೇಲೂರು:** ತಾಲ್ಲೂಕಿನ ಅರೇಹಳ್ಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಇತ್ತೀಚೆಗೆ ನಡೆದಿದ್ದ ಕಾಫಿ ಕಳವು ಪ್ರಕರಣಕ್ಕೆ ಸಂಬಂಧಿಸಿ ಆರು ಜನರನ್ನು ಬಂಧಿಸುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

ವಿವಿಧೆಡೆ ಕಾಫಿ ಕಳವು ಮಾಡುತ್ತಿದ್ದ ಐವರು ಹಾಗು ಕದ್ದ ಮಾಲು ಸ್ವೀಕರಿಸುತ್ತಿದ್ದ ಓರ್ವ ಸೇರಿ ಒಟ್ಟು ಆರು ಮಂದಿಯನ್ನು ವಶಕ್ಕೆ ಪಡೆಯಲಾಗಿದೆ. ಅದೇ ತಂಡ ತಾಲ್ಲೂಕಿನ ಹಲವು ಕಡೆ ರಾತ್ರಿ ವೇಳೆ ಕಾಫಿ ಕಳವು ಮಾಡಿತ್ತು. ಇತ್ತೀಚೆಗೆ ಅರೇಹಳ್ಳಿಯ ಉಲ್ಲಾಸ ನಗರದ ಜಗನ್ನಾಥಶೆಟ್ಟಿ ಎಂಬುವವರು ಕಣದಲ್ಲಿ ಕಾಫಿ ಒಣಗಿ ಹಾಕಿ ಅಲ್ಲೇ ಕಾರಿನಲ್ಲಿ ಮಲಗಿ ಫಸಲು ಕಾಯುತ್ತಿದ್ದರು.

ಈ ವೇಳೆ ಪ್ರವೇಶಿಸಿದ ಮೂವರಲ್ಲಿ ಇಬ್ಬರು ಕಾಫಿ ತುಂಬುತ್ತಿದ್ದರು. ಒಬ್ಬ ಜಗನ್ನಾಥಶೆಟ್ಟಿ ಅವರ ಕಾರಿನ ಹಿಂಭಾಗವೇ ಹೊಂಚು ಹಾಕಿ ನಿಂತಿದ್ದ. ಶೆಟ್ಟಿ ಅವರು ಕೆಳಗೆ ಇಳಿದು ಕಳ್ಳರನ್ನು ಹಿಡಿಯಲು ಪಯತ್ನ ಮಾಡಲು ಮುಂದಾದಾಗ ಹಿಂಬದಿಯಿಂದ ಬಲವಾಗಿ ಮಚ್ಚಿನಿಂದ



ಅವರ ತಲೆಗೆ ಹೊಡೆದಿದ್ದ. ನಂತರ ಮೂವರು ಆರೋಪಿಗಳು ಗನ್ ಹಾಗು 60 ಸಾವಿರ ರೂ. ಕಾಫಿ ಬೆಳೆ ಸಮೇತ ಪರಾರಿಯಾಗಿದ್ದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮದ್ ಸುಜೀತಾ ಅವರು, ಹಳೇಬೀಡು ಇನ್ಸ್‌ಪೆಕ್ಟರ್ ಜಗದೀಶ್ ಹಾಗು ನೇತೃತ್ವದಲ್ಲಿ ಮೂರು ತಂಡ ರಚಿಸಿದ್ದರು. ಈ ತಂಡ ಒಟ್ಟು ಆರು ಮಂದಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದು ಎಲ್ಲರನ್ನೂ ವಿಚಾರಣೆಗೆ ಒಳಪಡಿಸಲಾಗಿದೆ.


## ಮೂರು ಬಾರಿ ರಾಜ್ಯದಿಂದ ಪ್ರಸ್ತಾವನೆ | 12 ಕಿ.ಮೀ. ಟನೆಲ್‌ಗೆ ಡಿಪಿಆರ್

# ಶಿರಾಡಿ ಘಾಟ್‌ನಲ್ಲಿ ಸುರಂಗ ಮಾರ್ಗ: ಕೇಂದ್ರಕ್ಕೆ ಎನ್‌ಒಸಿ

• ಪ್ರಜೋದಯ ವರದಿ

**ಹಾಸನ:** ಮಲೆನಾಡು ಭಾಗದ ಶಿರಾಡಿ ಘಾಟ್‌ನಲ್ಲಿ ಸಂಚಾರ ಸುಗಮಗೊಳಿಸಲು ಸುರಂಗ ನಿರ್ಮಾಣ ಕಾಮಗಾರಿಗೆ ರಾಜ್ಯ ಸರ್ಕಾರ ಮುಂದಡಿ ಇಟ್ಟಿದ್ದು ಕೇಂದ್ರ ಸರ್ಕಾರಕ್ಕೆ ನಿರಪೇಕ್ಷಣಾ ಪತ್ರ (ಎನ್‌ಒಸಿ) ಸಲ್ಲಿಕೆಯಾಗಿದೆ.

ದಶಕದಿಂದ ಚರ್ಚೆಯಲ್ಲಿದ್ದ ಮಹತ್ವಾಕಾಂಕ್ಷಿ ಯೋಜನೆ ಮಹತ್ವದ ಹಂತ ತಲುಪಿದ್ದು ಮುಂದೆನಾಗುತ್ತದೆಂಬುದನ್ನು ಕಾದು ನೋಡಬೇಕಿದೆ. ಸುರಂಗ ನಿರ್ಮಾಣಕ್ಕೆ ಭಾರೀ ಮೊತ್ತ ಬೇಕಾಗುತ್ತದೆ. ಜೊತೆಗೆ ಇದು ಕಾರ್ಯ ಸಾಧುವಲ್ಲ ಎಂದು 2022ರಲ್ಲಿ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ಲೋಕಸಭೆಗೆ ತಿಳಿಸಿದ್ದರು. ಶಿರಾಡಿ ಘಾಟ್‌ನಲ್ಲಿ ಸುರಂಗ ನಿರ್ಮಾಣ ಕುರಿತು 2013 ರಿಂದ 18 ಹಾಗು ಪ್ರಸ್ತುತ ಮುಖ್ಯಮಂತ್ರಿ ಆಗಿ



ರುವ ಸಿದ್ದರಾಮಯ್ಯ ಅವರು ಮೂರು ಬಾರಿ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿದ್ದಾರೆ.

ಯೋಜನೆಗೆ ಕೇಂದ್ರ ಸರ್ಕಾರ ಒಪ್ಪಿಗೆ ಸೂಚಿಸಿದ ಬಳಿಕ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಡಿಪಿಆರ್ ಸಿದ್ಧಪಡಿಸಿ ಕೇಂದ್ರಕ್ಕೆ ಸಲ್ಲಿಸಿದೆ. ತರುವಾಯ ಭಾರತೀಯ ವಿಜ್ಞಾನ ಸಂಸ್ಥೆ ನೀಡಿದ ವಿಸ್ತೃತ ವರದಿ ಅನ್ವಯ ಕೇಂದ್ರ ಸರ್ಕಾರ ಅನುಮೋದನೆ ನೀಡಿದೆ. ಜೊತೆಗೆ ಭಾರತೀಯ ವಿಜ್ಞಾನ ಸಂಸ್ಥೆ ವರದಿ ಆಧರಿಸಿ ಕೇಂದ್ರ ಪರಿಸರ ಇಲಾಖೆ ಸಹ ಅನುಮೋದನೆ ನೀಡಿದೆ.

ಇದೀಗ ರಾಜ್ಯ ಸರ್ಕಾರವೂ ಉದ್ದೇಶಿತ ಸುರಂಗ ಮಾರ್ಗ(ಟನೆಲ್) ನಿರ್ಮಾಣಕ್ಕೆ ಎನ್‌ಒಸಿ ನೀಡಿದೆ. ಯೋಜನೆಗೆ ನಮ್ಮದೇನೂ ತಕರಾರಿಲ್ಲವೆಂದು

» ನಾಲ್ಕನೇ ಪುಟದಲ್ಲಿ

### ದೇವೇಗೌಡರ ಕನಸಿನ ಯೋಜನೆ

ಶಿರಾಡಿ ಸುರಂಗ ಮಾರ್ಗ ಬರೋಬ್ಬರಿ 20 ಸಾವಿರ ಕೋಟಿ ರೂ.ಗೂ ಅಧಿಕ ವೆಚ್ಚದ ಬೃಹತ್ ಯೋಜನೆಯಾಗಿದೆ. 2006-07 ರಲ್ಲೇ ನಿತಿನ್ ಗಡ್ಕರಿ ಅವರೊಂದಿಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಮಾತುಕತೆ ನಡೆಸಿ ಮನವಿ ಸಲ್ಲಿಸಿದ್ದರು. ಯೋಜನೆಯಿಂದ ಪರಿಸರಕ್ಕೆ ಹಾನಿಯಾಗುವುದಿಲ್ಲ, ಅಭಿವೃದ್ಧಿಗೆ ಇಂತಹ ಯೋಜನೆ ಅಗತ್ಯ ಇದೆ ಎಂದು ಅವರು ಈಗಲೂ ಪ್ರತಿಪಾದಿಸಿದ್ದಾರೆ. ದೇವೇಗೌಡರೇ ಯೋಜನೆಗೆ ಆಸಕ್ತಿ ವಹಿಸಿರುವುದು ಯೋಜನೆ ಅನುಷ್ಠಾನವಾಗುತ್ತದೆಂಬ ಆಶಾಭಾವ ಮೂಡಿಸಿದೆ.

# ಮಹಿಳೆಯ ಚಿನ್ನದ ಸರ ಅಪಹರಣ

**ಹಾಸನ:** ಡ್ರಾಪ್ ಮಾಡುವ ನೆಪದಲ್ಲಿ ಬೈಕ್ ಮೇಲೆ ಕೂರಿಸಿಕೊಂಡ ಅನಾಮಿಕ ಮಹಿಳೆ ಯೊಬ್ಬರ ಕೊರಳಲ್ಲಿದ್ದ 40 ಗ್ರಾಂ ತೂಕದ ಚಿನ್ನದ ಸರ ಕಿತ್ತುಕೊಂಡಿರುವ ಘಟನೆ ತಾಲ್ಲೂಕಿನ ಅದ್ದಿಹಳ್ಳಿ ಕೆರೆ ಏರಿ ಸಮೀಪ ಶುಕ್ರವಾರ ನಡೆದಿದೆ.

ದೇವನಹಳ್ಳಿ ತಾಲ್ಲೂಕು ಸಾದಹಳ್ಳಿ ನಿವಾಸಿ ಅರ್ಚನ ಸರ ಕಳೆದುಕೊಂಡವರು. ತವರು ಮನೆ ದೇವಿಹಳ್ಳಿಗೆ ತೆರಳುವುದಕ್ಕಾಗಿ ರಾತ್ರಿ 7.30ರ ಸಮಯದಲ್ಲಿ ಬಸ್‌ಗಾಗಿ ಕಾದು ನಿಂತಿದ್ದಾಗ ವ್ಯಕ್ತಿ ಬಂದು ಯಾವೂರಿಗೆ ಹೋಗಬೇಕೆಂದು ಕೇಳಿದ್ದಾನೆ. ದೇವಿಹಳ್ಳಿಗೆ ಎಂದು ಅರ್ಚನ ಅವರು ಹೇಳಿದಾಗ ತಾನು ಮಳಲಿಗೆ ಹೋಗುತ್ತಿದ್ದು ಬಿಡುತ್ತೇನೆ ಬನ್ನಿ ಎಂದು ಕೂರಿಸಿಕೊಂಡಿದ್ದಾನೆ. ಮಳಲಿ ಕಡೆಗೆ ತೆರಳದೆ ಅದ್ದಿಹಳ್ಳಿ ಕೆರೆ ಏರಿ ಮೇಲೆ ಹೋಗಿದ್ದು ಅವರು ಪ್ರಶ್ನಿಸಿದ್ದಕ್ಕೆ ಪೆಟ್ರೋಲ್ ಖಾಲಿ ಕ್ಯಾನ್ ತೆಗೆದುಕೊಂಡು ಬರೋಣವೆಂದು ಸುಳ್ಳು ಹೇಳಿದ್ದಾನೆ. ಸ್ವಲ್ಪ ದೂರ ಹೋದ ಬಳಿಕ ಬೈಕ್ ನಿಲ್ಲಿಸಿ ಹಲ್ಲೆ ಮಾಡಿ ಸುಮಾರು 40 ಗ್ರಾಂ ತೂಕದ ಚಿನ್ನದ ಮಾಂಗಲ್ಯ ಸರ ಕಿತ್ತುಕೊಂಡು ಹೋಗಿದ್ದಾನೆ. ಶಾಂತಿಗ್ರಾಮ ಠಾಣೆಯಲ್ಲಿ ದಾಖಲಾಗಿದೆ.

# ಹಂಪಾಪುರದಲ್ಲಿ ಚಿರತೆ ದಾಳಿಗೆ ಹಸು ಬಲಿ

• ಪ್ರಜೋದಯ ವರದಿ

**ರಾಮನಾಥಪುರ:** ಅರಕಲಗೂಡು ತಾಲ್ಲೂಕಿನ ಕಾಡಂಚಿನ ಗ್ರಾಮಗಳಲ್ಲಿ ಚಿರತೆ ಹಾವಳಿ ಹೆಚ್ಚಾಗಿದ್ದು ಹೋಬಳಿಯ ಹಂಪಾಪುರ ಗ್ರಾಮದಲ್ಲಿ ಭೀಕರ ದಾಳಿಗೆ ಹಸು ಮೃತಪಟ್ಟಿದೆ.

ನಿರಂತರ ಚಿರತೆ ದಾಳಿಯಿಂದ ಗ್ರಾಮಸ್ಥರು ಆತಂಕಗೊಂಡಿದ್ದು ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿಲ್ಲವೆಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಗ್ರಾಮದ ಸುತ್ತಮುತ್ತ ಚಿರತೆ ಜಾನುವಾರುಗಳ ಮೇಲೆ ದಾಳಿ ನಡೆಸುತ್ತಿವೆ. ಕಾಡು ಪ್ರಾಣಿಗಳು ಏಕಾಏಕಿ ಪ್ರತ್ಯಕ್ಷವಾಗುತ್ತವೆ. ಅದರಿಂದ ಮಹಿಳೆ ಮತ್ತು ಮಕ್ಕಳು ಮನೆಯಿಂದ ಹೊರಬರಲು ಹಿಂದೇಟು ಹಾಕುತ್ತಿದ್ದಾರೆ. ಚಿರತೆಗಳು



ಪ್ರತಿದಿನವೂ ಪ್ರತ್ಯಕ್ಷವಾಗುತ್ತಿರುವುದರಿಂದ ಜಮೀನು ಕೆಲಸಕ್ಕೆ ಹೋಗಲು ಸಾಧ್ಯ ವಾಗುತ್ತಿಲ್ಲ. ಆಯಕಟ್ಟಿನ ಜಾಗಗಳಲ್ಲಿ ಬೋನು ಇಟ್ಟು ಚಿರತೆ ಸೆರೆ ಹಿಡಿಯಬೇಕೆಂದು ಆಗ್ರಹಿಸಿದ್ದಾರೆ.

# ಅವೈಜ್ಞಾನಿಕ ಮ್ಯಾಗ್ನೆಟ್ ಶಾಲೆ ನಿರ್ಧಾರ ವಾಪಾಸ್‌ಗೆ ಆಗ್ರಹ

• ಪ್ರಜೋದಯ ವರದಿ

**ಹಾಸನ:** ಸರ್ಕಾರಿ ಶಾಲೆಗಳ ಬಲಪಡಿಸುವ ಬದಲು ಮ್ಯಾಗ್ನೆಟ್ ಕೆಪಿಎಸ್ ಶಾಲೆ ಹೆಸರಿನಲ್ಲಿ ಶಾಲೆಗಳ ಮುಚ್ಚಲು ಮುಂದಾಗಿರುವ ಸರ್ಕಾರ ತನ್ನ ಅವೈಜ್ಞಾನಿಕ ನಿರ್ಧಾರದಿಂದ ಹಿಂದೆ ಸರಿಯಬೇಕೆಂದು ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಡಾ.ಎಚ್.ಎಲ್.ಮಲ್ಲೇಶಗೌಡ ಅವರು ಆಗ್ರಹಿಸಿದರು.

ಆಲ್ ಇಂಡಿಯಾ ಡೆಮಾಕ್ರಟಿಕ್ ಸ್ಟುಡೆಂಟ್ ಆರ್ಗನೈಸೇಷನ್ (ಎಐಡಿಎಸ್‌ಒ) ವತಿಯಿಂದ ನಗರದ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ಹಮ್ಮಿಕೊಂಡಿದ್ದ ವಿದ್ಯಾರ್ಥಿ ಸಮ್ಮೇಳನಕ್ಕೆ ಚಾಲನೆ ನೀಡಿ ಮಾತನಾಡಿ, ಸರ್ಕಾರ ಹೊಸ ಕೆಪಿಎಸ್ ಮ್ಯಾಗ್ನೆಟ್




ಶಾಲೆಗಳನ್ನು ತೆರೆದು ಹಾಲಿ ಇರುವ ಸರ್ಕಾರಿ ಶಾಲೆಗಳನ್ನು ಮುಚ್ಚುವುದನ್ನು ಸಂಪೂರ್ಣವಾಗಿ ವಿರೋಧಿಸುತ್ತೇನೆ. ಶಾಲೆ ಉಳಿಸಲು ಎಐಡಿಎಸ್‌ಒ ವಿದ್ಯಾರ್ಥಿ ಸಂಘಟನೆ ಮಾಡುತ್ತಿರುವ ಹೋರಾಟಕ್ಕೆ ಅಭಿನಂದನೆ ಎಂದರು.

ಬೇರೆ ಹೆಸರಿನಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚಲು ಸರ್ಕಾರ ಮುಂದಾಗಿದೆ. ಇಂದು ಸರ್ಕಾರಿ ಶಾಲೆ ಅಭಿವೃದ್ಧಿಪಡಿಸುವ ಮಾತುಗಳು ಕೇವಲ ಹಾಳೆಯ ಮೇಲಿದೆ. ಸರ್ಕಾರಿ ಶಾಲೆಗಳನ್ನು ಉಳಿಸಿಕೊಳ್ಳುವ ಮಹತ್ವದ ಜವಾಬ್ದಾರಿ ನಾಗರಿಕರದ್ದಾಗಿದೆ ಎಂದರು.

ಎಐಡಿಎಸ್‌ಒ ರಾಜ್ಯ ಸಮಿತಿ ಉಪಾಧ್ಯಕ್ಷೆ ಚಂದ್ರಕಲಾ ಅವರು ಮಾತನಾಡಿ, ರಾಜ್ಯ ಸರ್ಕಾರ, ಕೆಪಿಎಸ್ ಮ್ಯಾಗ್ನೆಟ್ ಶಾಲೆಯ ಯೋಜನೆಯಡಿ ಗ್ರಾಮ ಪಂಚಾಯಿತಿಗೆ ಒಂದರಂತೆ ರಾಜ್ಯದಲ್ಲಿ 6000 ಮ್ಯಾಗ್ನೆಟ್ ಶಾಲೆ ಸ್ಥಾಪಿಸುವ ಮೂಲಕ 40,000ಕ್ಕೂ ಹೆಚ್ಚು ಸರ್ಕಾರಿ ಶಾಲೆ ಗಳನ್ನು ಮುಚ್ಚುವ ಮೂಲಕ ಬಡ ಮಕ್ಕಳ ಶಿಕ್ಷಣ ಕನಸನ್ನು ಕಸಿದುಕೊಳ್ಳಲು ಮುಂದಾಗುತ್ತಿದೆ. ರಾಜ್ಯದಲ್ಲಿ ಒಂದೇ ಒಂದು ಶಾಲೆ ಮುಚ್ಚುವುದಿಲ್ಲ ಎಂಬ ಸರ್ಕಾರದ ಸ್ಪಷ್ಟನೆ ಮತ್ತು ಮಾಧ್ಯಮ ಗಳೆದುರು ಶಿಕ್ಷಣ ಸಚಿವರು, ಹೇಳುತ್ತಿರುವ ಮಾತು ಸತ್ಯಕ್ಕೆ ದೂರವಾಗಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಯಾವ ಶಾಲೆಯನ್ನು ಮ್ಯಾಗ್ನೆಟ್ ಶಾಲೆಯನ್ನಾಗಿ ಮಾಡಬೇಕು. ಆ ಶಾಲೆಗೆ ಯಾವ ಶಾಲೆ ಸೇರಿಸಬೇಕೆಂಬುದರ

» ನಾಲ್ಕನೇ ಪುಟದಲ್ಲಿ

# ಯೋಜನೆ ಮರುನಾಮಕರಣಕ್ಕೆ ಮೋದಿ ಮಾಸ್ಟರ್

• ಪ್ರಜೋದಯ ವರದಿ

**ನವದೆಹಲಿ:** ಕೇಂದ್ರದ ಯೋಜನೆಗಳನ್ನು ಮರುನಾಮಕರಣ ಮಾಡುವುದರಲ್ಲಿ ಪ್ರಧಾನಿ ನರೇಂದ್ರ ಮೋದಿ ಮಾಸ್ಟರ್ ಎಂದು ಕಾಂಗ್ರೆಸ್ ಶನಿವಾರ ಟೀಕಿಸಿದೆ.

ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಜಾರಿಗೊಳಿಸಿದ್ದ 32 ಯೋಜನೆಗಳಿಗೆ ಬಿಜೆಪಿ ಸರ್ಕಾರ ಮರುನಾಮಕರಣ ಮಾಡಿರುವ ಪಟ್ಟಿಯನ್ನೂ ಅದು ಹಂಚಿಕೊಂಡಿದೆ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಗೆ ಪೂಜ್ಯ ಬಾಪು ಗ್ರಾಮೀಣ ರೋಜಗಾರ್ ಯೋಜನೆ ಎಂದು ಮರುನಾಮಕರಣ ಮಾಡುವ ಮತ್ತು ಕೆಲಸದ ದಿನಗಳನ್ನು ಹೆಚ್ಚಿಸುವ ಮಸೂದೆಗೆ ಕೇಂದ್ರ ಸಚಿವ ಸಂಪುಟ ಶುಕ್ರವಾರ ಅನುಮೋದನೆ ನೀಡಿತ್ತು.

ನರೇಂದ್ರ ಮೋದಿ ಅವರು ಪಂಡಿತ್ ಜವಾಹರಲಾಲ್ ನೆಹರೂ ಅವರನ್ನು ದ್ವೇಷಿಸುತ್ತಾರೆ. ಮಹಾತ್ಮ ಗಾಂಧಿ ಅವರನ್ನೂ ದ್ವೇಷಿಸುತ್ತಿರುವಂತೆ ತೋರುತ್ತಿದೆ. ಮಹಾತ್ಮ ಗಾಂಧಿ ಹೆಸರಿನಲ್ಲಿ ಏನು ತಪ್ಪಿದೆ. ಎಂಎನ್‌ಆರ್‌ಇಜಿಎ ಯೋಜನೆಗೆ ಪೂಜ್ಯ ಬಾಪು ಗ್ರಾಮೀಣ ರೋಜಗಾರ್ ಯೋಜನೆ ಎಂದು ಏಕೆ ಮರುನಾಮಕರಣ ಮಾಡಬೇಕೆಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಪ್ರಶ್ನಿಸಿದ್ದಾರೆ.

ಎಂಎನ್‌ಆರ್‌ಇಜಿಎ ಯೋಜನೆಗೆ ಮರುನಾಮಕರಣ ಮಾಡುತ್ತಿರುವುದರ ಹಿಂದೆ ಗಾಂಧಿ ಅವರನ್ನು ಜನರ ಮನಸ್ಸಿನಿಂದ ಅಳಿಸಿ ಹಾಕುವ ಹುನ್ನಾರ ಅಡಗಿದೆ. ಕ್ರಾಂತಿಕಾರಿ ಯೋಜನೆಯ ಶ್ರೇಯಸ್ಸನ್ನು ಪಡೆಯಲು ಪ್ರಧಾನಿ ಮೋದಿ ಮುಂದಾಗಿದ್ದಾರೆಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ವೇಣುಗೋಪಾಲ್ ಆರೋಪಿಸಿದ್ದಾರೆ.

# ಕೊಣನೂರು-ಕಟ್ಟೇಪುರ ಸೇತುವೆಗೆ 45 ಕೋಟಿ ರೂ. ಅನುದಾನ


• ಪ್ರಜೋದಯ ವರದಿ

**ಅರಕಲಗೂಡು:** ತಾಲ್ಲೂಕಿನ ಕೊಣನೂರು-ಕಟ್ಟೇಪುರ ನಡುವೆ ಸಂಪರ್ಕ ಸೇತುವೆ ನಿರ್ಮಾಣಕ್ಕೆ 45 ಕೋಟಿ ರೂ.ಗಳನ್ನು ರಾಜ್ಯ ಸರ್ಕಾರ ಬಿಡುಗಡೆಯಾಗಿದೆಯೆಂದು ಶಾಸಕ ಎ.ಮಂಜು ಅವರು ತಿಳಿಸಿದರು.

ಕೊಣನೂರು ಪ್ರವಾಸಿ ಮಂದಿರದಲ್ಲಿ ಶನಿವಾರ ಲೋಕೋಪಯೋಗಿ ಇಲಾಖೆ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅವರು, ನಾನು ಈ ಹಿಂದೆ ಸಚಿವನಾಗಿದ್ದ ವೇಳೆ ಗೊರೂರು, ರಾಮನಾಥಪುರ, ರುದ್ರಪಟ್ಟಣ ಹಾಗು ಕೊಣನೂರು-ಕಟ್ಟೇಪುರ ನಡುವೆ ಸೇತುವೆ ನಿರ್ಮಾ ಣಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೆ. ಆ ವೇಳೆ ಮೂರು ಸೇತುವೆ ನಿರ್ಮಾಣಕ್ಕೆ ಅನುದಾನ ಬಿಡುಗಡೆಯಾಗಿತ್ತು. ಕೊಣನೂರು-ಕಟ್ಟೇಪುರ ನಡುವಿನ ಸೇತುವೆ ನಿರ್ಮಾಣಕ್ಕೆ ಚಾಲನೆ ಸಿಕ್ಕಿರಲಿಲ್ಲ. ಈಗ ಶಾಸಕನಾಗಿದ್ದು, ಕಳೆದ ವಿಧಾನಸಭಾ ಅಧಿವೇಶನದ ವೇಳೆ ಸರ್ಕಾರದ ಗಮನ ಸೆಳೆದಿದ್ದೆ. ಆ ವೇಳೆ ಪರಿಶೀಲನೆ ನಡೆಸಲಾಗುವುದು ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಭರವಸೆ ನೀಡಿದ್ದರು. ಇತ್ತೀಚೆಗೆ ಹಾಸನದಲ್ಲಿ ನಡೆದ ಮುಖ್ಯಮಂತ್ರಿಗಳ ಕಾರ್ಯಕ್ರಮದಲ್ಲಿ ಮೊದಲ ಹಂತದ ಅನುದಾನ ಬಿಡುಗಡೆಗೆ ಕ್ರಮ ಕೈಗೊಂಡಿರುವುದಾಗಿ ತಿಳಿಸಿದ್ದರು. ಕೂಡಲೇ ಸೇತುವೆ ಕಾಮಗಾರಿ ಕೈಗೊಳ್ಳುವಂತೆ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸಿದ್ದೇನೆಂದು ಹೇಳಿದರು.

ಕೊಣನೂರು ಮತ್ತು ಕಟ್ಟೇಪುರ ನಡುವೆ ಸೇತುವೆ ನಿರ್ಮಾಣದಿಂದ ಸುಮಾರು 20 ಕಿ.ಮೀ. ಅಂತರದ ಸಂಚಾರಕ್ಕೆ ತಡೆ ಬೀಳಲಿದೆ. ಕೆಲವೇ ಕಿ.ಮೀ. ಅಂತರದಲ್ಲಿ ಈ ಎರಡು ಗ್ರಾಮಗಳು ಹಾಗು ಹತ್ತಾರು ಗ್ರಾಮಗಳ ಸಂಪರ್ಕ ಅತೀ ಸಮೀಪ ದಿಂದ ಕೂಡಿದೆ. ಸೇತುವೆ ನಿರ್ಮಾಣ ಕಾವೇರಿ ನದಿಯ ಮಧ್ಯೆ ನಡೆಯಲಿದೆ. ಸಂಪರ್ಕ ರಸ್ತೆಯನ್ನು ಸರ್ಕಾರಿ ಖರಾಬು, ಹಾಲಿ ರಸ್ತೆ ಜಾಗವನ್ನು ಬಳಕೆ ಮಾಡಿಕೊಂಡು ಸಂಪರ್ಕ ರಸ್ತೆ ಅಭಿವೃದ್ಧಿಯನ್ನು ಕೈಗೊಳ್ಳಬೇಕು. 45 ಕೋಟಿ ರೂ. ಅನುದಾನದಲ್ಲಿ 6 ಕೋಟಿ ರೂ. ಹಣ ವಶಕ್ಕೆ ಪಡೆಯುವ ಜಮೀನಿಗೆ ಮೀಸಲಿಡಲಾಗಿದೆ. ಮುಂದಿನ 20 ವರ್ಷಗಳ ವಿಷನ್ ಇಟ್ಟುಕೊಂಡು ಸೇತುವೆ ಮತ್ತು ಸಂಪರ್ಕ ರಸ್ತೆಯ ಅಭಿ ವೃದ್ಧಿಗೆ ಯೋಜನೆ ರೂಪಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕಾವೇರಿ ನದಿಯಲ್ಲಿ ಅತಿಯಾದ ನೀರಿನ ಹರಿವು ಉಂಟಾದಾಗ ಸಮಸ್ಯೆ ಉಂಟಾಗುತ್ತಿತ್ತು.ತೂಗು ಸೇತುವೆ ಮೇಲಿನ ನಿರ್ಬಂಧಕೂಡ ಎದುರಾಗುತಿತ್ತು. ಸೇತುವೆ ನಿರ್ಮಾಣದಿಂದ ಸಮಸ್ಯೆಗೆ ಪರಿಹಾರ



ದೊರೆಯುತ್ತಿದೆ ಎಂದರು.

**25 ಕೋಟಿ ರೂ. ಬಿಡುಗಡೆ:** ಕ್ಷೇತ್ರ ಅಭಿವೃದ್ಧಿಗೆ ಒತ್ತು ನೀಡುವ ಸಲುವಾಗಿ ಶಾಸಕರಿಗೆ 25 ಕೋಟಿ. ರೂ. ಅನುದಾನವನ್ನು ಸರ್ಕಾರ ನೀಡಿದೆ. ಈ ಹಣ ಬಳಕೆ ಸಲುವಾಗಿಯೂ ಕೂಡ ಜಿಪಂ, ಪಿಡಬ್ಲ್ಯೂಡಿ, ಪಟ್ಟಣ ಪಂಚಾಯಿತಿ ಹಾಗು ನೀರಾವರಿ ಇಲಾಖೆ ಇಂಜಿನೀಯರ್‌ಗಳ ಸಭೆ ನಡೆಸಿ ಯೋಜನೆ ರೂಪಿಸುವಂತೆ ಸೂಚನೆ ನೀಡಿದ್ದೇನೆ. ಪ್ರಮುಖವಾಗಿ ವಿದ್ಯಾರ್ಥಿ ನಿಲಯಗಳಿಗೆ 1 ಕೋಟಿ ರೂ., ಬಸ್ ನಿಲ್ದಾಣ ಅಭಿವೃದ್ಧಿಗೆ 1 ಕೋಟಿ ರೂ., ಎಸ್‌ಸಿ, ಎಸ್‌ಟಿ ಸಮುದಾಯ ಭವನಕ್ಕೆ 1 ಕೋಟಿ ರೂ., 4 ಕೋಟಿ ರೂ.ಗಳನ್ನು ಪಿಡಬ್ಲ್ಯೂಡಿ ರಸ್ತೆ, ಉಳಿದ 16 ಕೋಟಿ ರೂ.ಗಳನ್ನು ಗ್ರಾಮೀಣ ಅಭಿವೃದ್ಧಿಗೆ ಮೀಸಲಿಡಲಾಗಿದೆ ಎಂದು ಹೇಳಿದರು.

ಮುಖಂಡರಾದನರಸೇಗೌಡ, ಚೌಡೇಗೌಡ, ಪಿಡಬ್ಲ್ಯೂಡಿ ಅಧಿಕಾರಿಗಳು ಇದ್ದರು.

# ಬೇಲೂರಿನಲ್ಲಿ ವೈಭವದ ಹನುಮ ಜಯಂತಿ ಶೋಭಾಯಾತ್ರೆ

• ಪ್ರಜೋದಯ ವರದಿ

**ಬೇಲೂರು:** ಪಟ್ಟಣದ ಲಕ್ಷ್ಮೀಪುರ ಬಡಾವಣೆಯ ವೀರಾಂಜನೇಯಸ್ವಾಮಿ ದೇಗುಲದ 12ನೇ ವಾರ್ಷಿಕೋತ್ಸವ, ಹನುಮ ಜಯಂತಿ ಹಾಗು ಶೋಭಾಯಾತ್ರೆ ನೂರಾರು ಭಕ್ತರ ಸಮ್ಮುಖದಲ್ಲಿ ಶನಿವಾರ ಅರ್ಥಪೂರ್ಣವಾಗಿ ನಡೆಯಿತು.

ವೀರಾಂಜನೇಯಸ್ವಾಮಿ ದೇಗುಲದಲ್ಲಿ ಮಹಾ ಅಭಿಷೇಕ, ವಿಶೇಷ ಅಲಂಕಾರ, ಸಪರಿ ವಾರ ರಾಮತಾರಕ ಹವನ, ಪೂರ್ಣಾಹುತಿ, ಮಹಾ ಮಂಗಳಾರತಿ, ತೀರ್ಥಪ್ರಸಾದ ವಿನಿ ಯೋಗ ನಡೆಯಿತು. ಸಾವಿರಾರು ಭಕ್ತರಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಮಧ್ಯಾಹ್ನ ವಿವಿಧ ಪುಷ್ಪಗಳಿಂದ ಅಲಂಕರಿಸಿದ್ದ ಮಂಟಪ ದಲ್ಲಿ ವೀರಾಂಜನೇಯ ಸ್ವಾಮಿಯ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ, ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಲಾಯಿತು. ಭಕ್ತರು ಸೇಬು ಹಾಗು ಹಣದ ಹಾರವನ್ನು ಉತ್ಸವ ಮೂರ್ತಿಗೆ ಹಾಕಿ ಭಕ್ತಿಯನ್ನು ಮೆರೆದರು.

ನೂರಾರು ಯುವಕರು, ಭಕ್ತರು ತಮ್ಮ ವಾಹನಗಳಿಗೆ ಹನುಮ ಧ್ವಜ ಅಳವಡಿಸಿ ಕೊಂಡಿದ್ದರು. ಡಿ.ಜೆ. ಸದ್ದು, ವಿವಿಧ ವಾದ್ಯ, ಡೋಲುಗಳ ತಾಳಕ್ಕೆ ಕುಣಿದು ಕುಪ್ಪಳಿಸಿದರು. ಮಹಿಳೆಯರು ಮತ್ತು ಪುರುಷರಿಗಾಗಿ ಪ್ರತ್ಯೇಕ ಡಿಜೆ ವ್ಯವಸ್ಥೆ ಮಾಡಲಾಗಿತ್ತು. ಉಡುಪಿಯಿಂದ ಬಂದಿದ್ದ 30 ಮಕ್ಕಳು ಭಜನೆಯೊಂದಿಗೆ ನೃತ್ಯ ಮಾಡಿ ನೆರೆದಿದ್ದ



ವರನ್ನು ಆಕರ್ಷಿಸಿದರು. ಮೆರವಣಿಗೆಯಲ್ಲಿ ಶ್ರೀರಾಮನ ಸ್ತಬ್ಧಚಿತ್ರದ ಗಮನ ಸೆಳೆಯಿತು.

ಅಹಿತಕರ ಘಟನೆಗಳು ನಡೆಯದಂತೆ ಎಸ್ಪಿ ಮೊಹಮ್ಮದ್ ಸುಜೀತಾ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ವಹಿಸಲಾಗಿತ್ತು. ಪಟ್ಟಣದ ಹಲವಾರು ಆಂಜನೇಯ ದೇಗುಲಗಳಲ್ಲಿ ವಿಶೇಷ ಪೂಜೆ ಜರುಗಿದವು. ಹೊಳೆ ಬೀದಿಯ ಆಂಜನೇಯ ದೇಗುಲದ ಬಳಿ ದೇಗುಲದ ಟ್ರಸ್ಟ್ ಅಧ್ಯಕ್ಷ ಬಿ.ಗಿರೀಶ್ ನೇತೃತ್ವದಲ್ಲಿ ಭಕ್ತರಿಗೆ ಅನ್ನ ಸಂರ್ಪಣೆ ಮಾಡಲಾಯಿತು.

ವೀರಾಂಜನೇಯಸ್ವಾಮಿ ದೇಗುಲ ಸಮಿತಿ ಅಧ್ಯಕ್ಷ ಮೋಹನ್ ಅವರು ಮಾತನಾಡಿ, ಭಕ್ತರ ಸಹಕಾರದಿಂದ ಹನುಮ ಜಯಂತಿ ಅದ್ದೂರಿಯಾಗಿ ನಡೆದಿದೆಯೆಂದರು.

ಶಾಸಕ ಹೆಚ್.ಕೆ.ಸುರೇಶ್ ಅವರು ಮಾತನಾಡಿ, ಬೇಲೂರಿನ ಜನರು ಸಂಭ್ರಮ ದಿಂದ ಹನುಮ ಜಯಂತಿ ಆಚರಿಸುತ್ತಿದ್ದು, ಆಂಜನೇಯ ಕ್ಷೇತ್ರದ ಹಾಗೂ ನಾಡಿನ ಜನರಿಗೆ ಒಳಿತು ಮಾಡಲಿ ಎಂದರು.

ಮೆರವಣಿಗೆಯಲ್ಲಿ ಭಜರಂಗದಳದ ಸಕಲೇಶಪುರ ರಘು, ಕಾಫಿ ಬೆಳೆಗಾರರ ಸಂಘದ ತಾಲ್ಲೂಕು ಘಟಕದ ಅಧ್ಯಕ್ಷ ಅದ್ದೂರಿ ಕುಮಾರ್, ವೀರಶೈವ ಲಿಂಗಾಯತ ತಾಲ್ಲೂಕು ಅಧ್ಯಕ್ಷ ಅಡಗೂರು ಬಸವರಾಜು, ನಿಕಟಪೂರ್ವ ಅಧ್ಯಕ್ಷ ಬಲ್ಲೇನಹಳ್ಳಿ ರವಿಕುಮಾರ್, ಉಪಾಧ್ಯಕ್ಷ ಕುಮಾರಸ್ವಾಮಿ (ಅರುಣ್), ಬಿಜೆಪಿ ತಾಲ್ಲೂಕು ಅಧ್ಯಕ್ಷ ಕೌರಿ ಸಂಜಯ್, ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಕೊರಟಿಕೆರೆ ಪ್ರಕಾಶ್, ಹನುಮ ಜಯಂತಿ ಸಮಿತಿಯ ಅನಂತರಾಜೇ ಅರಸು, ನಾಗೇಶ್ (ಗುಂಡ) ಇತರರಿದ್ದರು.

# ಡಿ.16ಕ್ಕೆ ಮಳವಳ್ಳಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು

• ಪ್ರಜೋದಯ ವರದಿ



**ಬೆಂಗಳೂರು:** ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಡಿ.16ರಂದು ರಾಜ್ಯಕ್ಕೆ ಭೇಟಿ ನೀಡಲಿದ್ದಾರೆ. ಮಂಡ್ಯ ಜಿಲ್ಲೆಯ ಮಳವಳ್ಳಿಯಲ್ಲಿ ನಡೆಯಲಿರುವ ಆದಿ ಜಗದ್ಗುರು ಶಿವರಾತ್ರೀಶ್ವರ ಶ್ರೀಗಳ 1066ನೇ ಜಯಂತಿಯಲ್ಲಿ ಭಾಗವಹಿಸಲಿದ್ದಾರೆ.

ಮಳವಳ್ಳಿಯ ಮುನ್ಸಿಪಲ್ ಮೈದಾನದಲ್ಲಿ ಕಾರ್ಯಕ್ರಮ ನಡೆಯಲಿದೆ. ಡಿ.16ರ ಮಧ್ಯಾಹ್ನ 2.10ಕ್ಕೆ ಮೈಸೂರಿನ ಏರ್‌ಪೋರ್ಟ್‌ಗೆ ಆಗಮಿಸುವ ಅವರು, ಹೆಲಿಕಾಪ್ಟರ್‌ನಲ್ಲಿ ಮಳವಳ್ಳಿಗೆ ತೆರಳುತ್ತಾರೆ. ಅಂದು ಸಂಜೆ 5.25ಕ್ಕೆ ಮಳವಳ್ಳಿಯಿಂದ ಮೈಸೂರಿಗೆ ಹಿಂದಿರುಗುವ ರಾಷ್ಟ್ರಪತಿ, ಡಿ.16 ರಂದು ರಾತ್ರಿ ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಲಿದ್ದಾರೆ. ಡಿ.17ರ ಬೆಳಿಗ್ಗೆ 9.25ಕ್ಕೆ ಮೈಸೂರಿನಿಂದ ತಿರುಪತಿಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ತೆರಳುತ್ತಾರೆ.

# ಭಾವ ಲಹರಿ

## ರೆಸ್ಟೋರೆಂಟ್‌ಗಳಿಗೆ ಸ್ಟಾರ್ ಪಟ್ಟ ಕೊಡುವ ಟೈರ್ ಕಂಪೆನಿ

ಮಿಷಲಿನ್ ಸ್ಟಾರ್ ರೇಟಿಂಗ್ ಇಂದಿಗೂ ಆಹಾರವನ್ನಷ್ಟೇ ಗಮನದಲ್ಲಿರಿಸಿ ರೆಸ್ಟೋರೆಂಟ್‌ಗಳನ್ನು ಶ್ರೇಣೀಕರಿಸುತ್ತದೆ. ಆದರೆ ಈಗ ಅದು ಬಹು ಪ್ರತಿಷ್ಠೆಯ ವಿಷಯ. ಮಿಷಲಿನ್ ಇವತ್ತಿಗೂ ಒಂದು, ಎರಡು, ಮೂರು ಇಷ್ಟೇ ಸ್ಟಾರ್ ನೀಡುತ್ತದೆ. ಆದರೆ ಮಿಷಲಿನ್ ಎಲ್ಲ ರೆಸ್ಟೋರೆಂಟ್‌ಗಳನ್ನೂ ಶ್ರೇಣೀಕರಿಸುವುದಿಲ್ಲ. ಖಾನಾವಳಿಯ ಯಜಮಾನರು ಬೇಕಾದರೆ ನಮ್ಮನ್ನು ಗಮನಿಸಿ ಎಂದಷ್ಟೇ ಮಿಷಲಿನ್‌ಗೆ ಪತ್ರ ಬರೆಯಬಹುದು.



ಫೈವ್ ಸ್ಟಾರ್ ಹೋಟೆಲ್‌ನ ಸಾವಿರ ರುಪಾಯಿಯ ಚಹಾಕ್ಕಿಂತ ಗೂಡಂಗಡಿಯ ಕಟಿಂಗ್ ಚಹಾ ಬಹಳ ಖಡಕ್ ರುಚಿ. ಮಿರ್ಚಿ, ಮಂಡಕ್ಕಿ ಇವೆಲ್ಲ ರಸ್ತೆ ಬದಿಯಲ್ಲಿಯೇ ನಿಂತು ತಿನ್ನಬೇಕು. ದೋಸೆ ಎಂದರೆ ನಮ್ಮೂರ ತಿಂಡಿ ಹೋಟೆಲ್‌ನಲ್ಲಿಯೇ ತಿನ್ನಬೇಕು. ಇಡ್ಲಿ ವಡೆ ಎಂದರೆ ಬ್ರಾಹ್ಮಣರ ಕಾಫೀ ಬಾರ್, ಗಿರ್ಮಿಟ್ ಎಂದರೆ ಹುಬ್ಬಳ್ಳಿಯ ದುರ್ಗದ ಬೈಲು, ಬೆಣ್ಣೆ ದೋಸೆ ಎಂದರೆ ದಾವಣಗೆರೆಯ ಶ್ರೀ ಗುರು ಕೊಟ್ಟೂರೇಶ್ವರ ಬೆಣ್ಣೆ ದೋಸೆ ಹೋಟೆಲ್. ಹೀಗೆ ಪಟ್ಟಿ ದೊಡ್ಡದು. ಈ ಯಾವ ಹೋಟೆಲ್ಲಿಗೂ ಯಾವುದೇ ಸ್ಟಾರ್‌ನ ಹಮ್ಮು-ಗಿಮ್ಮು ಇಲ್ಲ. ಅವು ಬಹುಜನಪ್ರಿಯ.

ವಿಷಯ ಹೀಗಿರುವಾಗ ಯಾವ ಕರ್ಮಕ್ಕೆ ಈ ಸ್ಟಾರ್ ಹೋಟೆಲ್‌ಗಳಿಗೆ ಐದು, ಏಳು, ಮೂರು ಇತ್ಯಾದಿ ಸ್ಟಾರ್ ಕೊಡುವುದು? ಅಲ್ಲಿನ ತಿಂಡಿಯೋ, ದೋಸೆಯೋ? ಟಿ.ಪಿ.ಕೈಲಾಸಂ ಅವರು ನೀರು ಹಾಲು ಬೆರೆಸಿ ಮಾಡುವ ಚಹಾವನ್ನು ವ್ಯಾಖ್ಯಾನಿಸುತ್ತ ಆಕಾಶಾತ್ ಪತಿತಂ ತೋಯಂ, ಯಥಾ ಗಚ್ಛತಿ ಚಾ ಗರಂ ಎಂದಿದ್ದರು. ಅಂತಿರ್ಪ ಆಕಾಶದಿಂದ ಬಿದ್ದ ನೀರಿನಂಥ ಚಹಾ ಕೊಡುವ ಹೋಟೆಲ್ಲುಗಳಿಗೆ ಕೊಡುವ ಐದು ನಕ್ಷತ್ರಗಳಿಗೆ ಅರ್ಥವಿದೆಯೇ?

ಇಂದು ಸಾಮಾನ್ಯ ಗೊಂದಲವಿದೆ. ನಾವು ರೆಸ್ಟೋರೆಂಟ್ ಮತ್ತು ಹೋಟೆಲ್ ಎಂಬೆರಡು ಇಂಗ್ಲಿಷ್ ಶಬ್ದವನ್ನು ಬೇಕಾಬಿಟ್ಟಿ ಬಳಸುತ್ತೇವೆ. ಇವೆರಡೂ ಬೇರೆ ಬೇರೆ. ರೆಸ್ಟೋರೆಂಟ್ ಎಂದರೆ ಹೋಟೆಲ್ ಅಲ್ಲ, ಹೋಟೆಲ್ ಎಂದರೆ ರೆಸ್ಟೋರೆಂಟ್ ಅಲ್ಲ. ರೆಸ್ಟೋರೆಂಟ್- ಆಹಾರ ಮತ್ತು ಪಾನೀಯ ಒದಗಿಸುವ ಜಾಗ, ಖಾನಾವಳಿ. ಹೋಟೆಲ್ ಎಂದರೆ ಅದು ಮುಖ್ಯವಾಗಿ ತಂಗುವ ಪೂರ್ಣ ವ್ಯವಸ್ಥೆ.

ನಮ್ಮ ಕಡೆಯಂತೂ ರೆಸ್ಟೋರೆಂಟ್ ಎಂಬ ಶಬ್ದದ ಬಳಕೆಯೇ ಮೊದಲು ಇರಲಿಲ್ಲ. ಆಹಾರ ಕೊಡುವ ಎಲ್ಲದಕ್ಕೂ ಹೋಟೆಲ ಎಂದೇ ಕರೆದು ಅಭ್ಯಾಸ. ಉಳಿದುಕೊಳ್ಳುವುದು ಲಾಡ್ಜ್. ಅಮೆರಿಕ ಮತ್ತು ಬಹುತೇಕ ದೇಶಗಳಲ್ಲಿ ರೆಸ್ಟೋರೆಂಟ್ ಮತ್ತು ಹೋಟೆಲ್ ಇವೆರಡನ್ನೂ ಸ್ಪಷ್ಟವಾಗಿ ಪ್ರತ್ಯೇಕಿಸಿ ಬಳಸುತ್ತಾರೆ. ಅವೆಂದೂ ಬೇರೆ ಬೇರೆ.

ಅಮೆರಿಕಕ್ಕೆ ಬಂದ ಹೊಸತರಲ್ಲಿ ನಾನು ಒಂದು ಎಡವಟ್ಟು ಮಾಡಿಕೊಂಡಿದ್ದೆ. ನನಗೆ ಹಸಿವಾಗಿದೆ, ಹೋಟೆಲ್ಲಿಗೆ ಹೋಗೋಣ ಎಂದು ಆಫೀಸಿನಲ್ಲಿ ಸಹವರ್ತಿಯೊಬ್ಬಳ ಬಳಿ ಹೇಳಿ ಬಿಟ್ಟಿದ್ದೆ! ಕ್ಷಣಾರ್ಧದಲ್ಲಿ ಅಪಾರ್ಥ ಗ್ರಹಿಕೆಗೆ ಬಂತು, ವಿವರಿಸಬೇಕಾಯ್ತು. ವಿವರಣೆಯ ಮೂಲಕ ಅಪಾರ್ಥವನ್ನೂ ಸ್ಪಷ್ಟಪಡಿಸಿದಂತಾಯಿತು ಅನ್ನಿ. ಇವತ್ತಿಗೂ ಎಲ್ಲಿಯೋ ಹೊರಗಿದ್ದಾಗ ಹಸಿವಾದರೆ ಹೋಟೆಲ್ಲಿಗೆ ಹೋಗೋಣ ಎಂದೇ ಮಾತು ಹೊರಡುತ್ತದೆ. ಆಮೇಲೆ ರೆಸ್ಟೋರೆಂಟ್ ಎಂದು ಸರಿಮಾಡಿಕೊಳ್ಳುತ್ತೇನೆ.

ಹೋಟೆಲ್ಲಿನಲ್ಲಿ ಉಳಿಯಲು ಬೇಕಾದ ಎಲ್ಲ ವ್ಯವಸ್ಥೆಯ ಜತೆ ಆಹಾರವೂ ಸಿಗುತ್ತದೆ, ಆದರೆ ಹೋಟೆಲ್ಲಿನ ಉದ್ದೇಶ ಆಹಾರ ಮಾತ್ರವಲ್ಲ. ಆ ಕಾರಣಕ್ಕೆ ಐದು, ಏಳು ಸ್ಟಾರ್ ಹೋಟೆಲ್ಲಿನ ಆಹಾರವೂ ಅತ್ಯಂತ ರುಚಿಯಾದದ್ದಿರ ಬೇಕೆಂದಿಲ್ಲ. ಹೋಟೆಲ್‌ಗಳಿಗೆ ಸ್ಟಾರ್ ಕೊಡುವುದು ಅಲ್ಲಿ ತಂಗಲು ಬೇಕಾದ ಸವಲತ್ತು, ಸೌಲಭ್ಯಗಳ ಆಧಾರದ ಮೇಲೆ.

ಆಹಾರವೂ ರುಚಿಯಾಗಿದ್ದರೆ ನಸೀಬು. ಭಾರತದಲ್ಲಿ ಆಹಾರಕ್ಕೆ-ಖಾನಾವಳಿಗಳಿಗೆ ಸ್ಟಾರ್‌ಗಿರಿ ಕೊಡುವ ಪ್ರತ್ಯೇಕ ವ್ಯವಸ್ಥೆ ಇದ್ದಂತಿಲ್ಲ. ಇದ್ದರೂ ಅದಕ್ಕೆ ಮಹತ್ವ ಅಷ್ಟಿಲ್ಲ.

ಮಿಷಲಿನ್ ಟೈರ್ ಕಂಪನಿಯ ಹೆಸರು ಕೇಳಿರುತ್ತೀರಿ. ಆಂಡ್ರೆ ಮತ್ತು ಎಡ್ವರ್ಡ್ 1889 ರಲ್ಲಿ ಫ್ರಾನಲ್ಲಿ ಇದನ್ನು ಸ್ಥಾಪಿಸಿದ್ದು. ಆಗ ಕಾರುಗಳು ಈಗಿನಷ್ಟು ಓಡಾಡದ ಸಮಯ. ಇಡೀ ಫ್ರಾನ್ಸಿನಲ್ಲಿ ಇದ್ದದ್ದೇ 3000 ಕಾರುಗಳು. ದಶಕ ಕಳೆದರೂ ಮಿಷಲಿನ್ ಕಂಪನಿ ಅಂದುಕೊಂಡಷ್ಟು ಉದ್ಧಾರವಾಗಲಿಲ್ಲ, ಟೈರ್ ಮಾರಾಟವಾಗುತ್ತಿರಲಿಲ್ಲ. ಆಂಡ್ರೆ ಮತ್ತು ಎಡ್ವರ್ಡ್ ತಮ್ಮ ಕಾರ್ಖಾನೆಯಲ್ಲಿ ತಯಾರಾಗುವ ಟೈರ್ ಹೆಚ್ಚಿಗೆ ಮಾರಾಟವಾಗಬೇಕೆಂದರೆ ಏನು ಮಾಡಬೇಕೆಂದು ಯೋಚನೆಗೆ ಬಿದ್ದರು. ಕಾರುಗಳ ಟೈರ್ ಸವೆಯಬೇಕು.

ಸವೆಯಬೇಕೆಂದರೆ ಜನರು ಹೆಚ್ಚು ಓಡಾಡಬೇಕು ಎಂಬುದನ್ನು ಮನಗಂಡರು. ಆ ಪ್ರಯತ್ನವಾಗಿ 1900ರಲ್ಲಿ ಮಿಷಲಿನ್ ಒಂದು ಚಿಕ್ಕ ಪುಸ್ತಕವನ್ನು ಅಚ್ಚು ಹಾಕಿಸಿತು. ಅದರಲ್ಲಿ ನಕಾಶೆ, ಟೈರ್ ಬದಲಿಸುವುದು ಹೇಗೆ, ಸುತ್ತ ಮುತ್ತಲಿನ ಊರಿನ ಮೆಕ್ಯಾನಿಕ್‌ಗಳ ವಿವರ, ಪೆಟ್ರೋಲ್ ಬಂಕ್, ಉಳಿಯಲು ಬೇಕಾಗುವ ಜಾಗ ಇವೆಲ್ಲ ಪಟ್ಟಿಮಾಡಲಾಗುತ್ತಿತ್ತು. ಒಟ್ಟಾರೆ ತಿರುಗಾಡುವವರಿಗೆ ಬೇಕಾದ ಮಹತ್ವದ ವಿಷಯ ಅದರಲ್ಲಿರುತ್ತಿತ್ತು. ಜನರು ಇದನ್ನು ಹಿಡಿದು ಪ್ರವಾಸಕ್ಕೆ ಹೊರಡುತ್ತಿದ್ದರು.

ಆ ಪುಸ್ತಕದಲ್ಲಿ ರೆಸ್ಟೋರೆಂಟ್-ಉಪಾಹಾರ, ಖಾನಾವಳಿಗಳಿಗೆ ಸ್ಟಾರ್ ಕೊಡಲಾಗುತ್ತಿತ್ತು. ಸ್ಟಾರ್ ಕೊಡುವುದು ಎಂದರೆ ಖಾನಾವಳಿ ಹೆಸರಿನ ಎದುರು ★, ★★, ★★★ ಎಂದು ಅಚ್ಚುಹಾಕಲಾಗುತ್ತಿತ್ತು. ಆ ಸ್ಟಾರ್‌ಗಳಿಗೆ ವಿಶೇಷ ಅರ್ಥವಿತ್ತು, ಅದನ್ನು ಪುಟದ ಕೊನೆಯಲ್ಲಿ ಚಿಕ್ಕದಾಗಿ ಪ್ರಿಂಟ್ ಮಾಡಲಾಗುತ್ತಿತ್ತು. ಒಂದು ಸ್ಟಾರ್ ಎಂದರೆ ಆ ನಿಗದಿತ ವರ್ಗದ ಖಾನಾವಳಿಗಳಲ್ಲಿಯೇ ಉತ್ತಮ.

ಪ್ರಯಾಣಿಸುವಾಗ ನಿಲ್ಲಿಸಿ ತಿಂದು ಹೋಗಬಹುದು. ಎರಡು ಸ್ಟಾರ್ ಇದ್ದರೆ- ಅತಿ ರುಚಿಯ ಆಹಾರ, ಮಾರ್ಗ ಮಧ್ಯೆ- ಸುತ್ತು ಮಾರ್ಗ ಬಳಸಿ, ಹೋಗಿ ತಿನ್ನಬಹುದಾದ ಖಾನಾವಳಿ. ಇನ್ನು ಮೂರು ಸ್ಟಾರ್ ಎಂದರೆ ಅಸಾಧಾರಣ ಆಹಾರ, ತಿನ್ನಲಿಕ್ಕೆಂದೇ ಹೋಗಿ ಬರಬಹುದಾದಷ್ಟು ಒಳ್ಳೆಯ ಖಾನಾವಳಿ. ಈ ರೀತಿ ಸ್ಟಾರ್ ಕೊಡುವ ಮೂಲ ಉದ್ದೇಶ ಪ್ರತಿ ಖಾನಾವಳಿಯ ಎದುರು ಅದೇ ವಿಷಯ ಪುನರಾವರ್ತಿಸುವುದಕ್ಕಿಂತ, ಕೊನೆಯಲ್ಲಿ ಒಂದು, ಎರಡು, ಮೂರು ಸ್ಟಾರ್ ಎಂದರೆ ಏನೆಂದು ವಿವರಣೆ ಕೊಟ್ಟರೆ ಅಷ್ಟು ಪ್ರಿಂಟ್ ಮಾಡುವ ವೆಚ್ಚದಲ್ಲಿ ಉಳಿತಾಯ. ಹಾಗಾಗಿ, ಈ ರೀತಿ, ಆಹಾರಕ್ಕೆ ಮಾತ್ರ ಸೀಮಿತವಾದ ಸ್ಟಾರ್ ಕೊಡುವ ಪದ್ಧತಿ ಶುರುವಾದದ್ದು.

ಹಾಗೆ ಶುರುವಾದ, ನೂರು ವರ್ಷದ ಹಿಂದೆ ಆರಂಭವಾದ ಮಿಷಲಿನ್ ಸ್ಟಾರ್ ರೇಟಿಂಗ್ ಇಂದಿಗೂ ಆಹಾರವನ್ನಷ್ಟೇ ಗಮನದಲ್ಲಿರಿಸಿ ರೆಸ್ಟೋರೆಂಟ್‌ಗಳನ್ನು ಶ್ರೇಣೀಕರಿಸುತ್ತದೆ. ಆದರೆ ಈಗ ಮಿಷಲಿನ್ ಸ್ಟಾರ್ ರೆಸ್ಟೋರೆಂಟ್ ಎಂದರೆ ಅದು ಬಹು ಪ್ರತಿಷ್ಠೆಯ ವಿಷಯ, ಗರಿ. ಮಿಷಲಿನ್ ಇವತ್ತಿಗೂ ಒಂದು, ಎರಡು, ಮೂರು ಇಷ್ಟೇ ಸ್ಟಾರ್ ನೀಡುತ್ತದೆ. ಆದರೆ ಮಿಷಲಿನ್ ಎಲ್ಲ ರೆಸ್ಟೋರೆಂಟ್‌ಗಳನ್ನೂ ಶ್ರೇಣೀಕರಿಸುವುದಿಲ್ಲ.

ಖಾನಾವಳಿಯ ಯಜಮಾನರು ಬೇಕಾದರೆ ನಮ್ಮನ್ನು ಗಮನಿಸಿ ಎಂದಷ್ಟೇ ಮಿಷಲಿನ್‌ಗೆ ಪತ್ರ ಬರೆಯಬಹುದು. ಯಾವುದನ್ನು ಶ್ರೇಣೀಕರಿಸಬೇಕು ಎಂಬುದರ ಆಯ್ಕೆ ಮಿಷಲಿನ್‌ಗೆ ಬಿಟ್ಟದ್ದು. ಈ ಶ್ರೇಣೀಕರಿಸುವ ಕೆಲಸವನ್ನು ಒಂದು ವಿಶೇಷ ಗೌಪ್ಯ ತಂಡ ಮಾಡುತ್ತದೆ. ಆ ತಂಡದ ಹೆಸರು, ವಿವರಣೆ ಎಲ್ಲವೂ ಪರಮ ಗೌಪ್ಯದ ವಿಚಾರ.

ಹೀಗೆ ಆಯ್ಕೆಯಾದ ರೆಸ್ಟೋರೆಂಟ್‌ಗಳಿಗೆ ಮಿಷಲಿನ್ ತನ್ನ ಈ ವಿಶೇಷ ಇನ್ಸ್‌ಪೆಕ್ಟರ್‌ಗಳನ್ನು ಕಳುಹಿಸಿಕೊಡುತ್ತದೆ. ಆ ಪರೀಕ್ಷಕರು ಸಹಜ ಗ್ರಾಹಕರಂತೆ ಹತ್ತಾರು ಬಾರಿ, ತಿಂಗಳುಗಳ ಅಂತರದಲ್ಲಿ, ದಿನದ ಬೇರೆ ಬೇರೆ ಸಮಯದಲ್ಲಿ ಅಲ್ಲಿ ಬಂದು ಆಹಾರದ ರುಚಿ, ಗುಣಮಟ್ಟವನ್ನು ತಿಂದು ಪರೀಕ್ಷಿಸುತ್ತಾರೆ.

ಅಷ್ಟೇ ಅಲ್ಲ, ಪ್ರತಿ ಬಾರಿಯೂ ಆಹಾರದ ರುಚಿ, ಶುಚಿ ಇತ್ಯಾದಿ ಅದೇ ಗುಣಮಟ್ಟದ್ದಿದೆಯೇ ಎಂಬ ಪರೀಕ್ಷೆಯನ್ನೂ ಮಾಡುತ್ತಾರೆ. ಒಂದು ದಿನ ಒಂದೊಂದು ರುಚಿ ಇದ್ದರೆ ಪರೀಕ್ಷೆಯಲ್ಲಿ ನಪಾಸ್. ಎಲ್ಲವೂ ಪರಮ ಗೌಪ್ಯವಾಗಿ, ಸದ್ದು ಗದ್ದಲವಿಲ್ಲದೆ ನಡೆಯುವ ಕೆಲಸ. ಖುದ್ದು ರೆಸ್ಟೋರೆಂಟ್ ನವರಿಗೆ, ಮಾಲೀಕರಿಗೆ ಮಿಷಲಿನ್ ತಮ್ಮನ್ನು ಪರೀಕ್ಷೆ ಮಾಡುತ್ತಿದೆ ಎಂಬ ಸುಳಿವು ಕೂಡ ಇರುವುದಿಲ್ಲ.

ಈ ರೀತಿ ಅಳೆದು ತೂಗಿ ಅಪರೂಪಕ್ಕೆ ಒಂದು ರೆಸ್ಟೋರೆಂಟ್ ಗುರುತಿಸಿ ಅದಕ್ಕೆ ಮಿಷಲಿನ್ ಸ್ಟಾರ್ ನೀಡುತ್ತದೆ. ಆಯ್ಕೆಯಾಗದಿದ್ದರೆ ಹೀಗೆಂದು ಪರೀಕ್ಷೆ ಅಲ್ಲಿ ನಡೆದಿತ್ತು ಎಂದೇ ಯಾರಿಗೂ ತಿಳಿಯುವುದಿಲ್ಲ. ಮಿಷಲಿನ್‌ನ ಇನ್ಸ್‌ಪೆಕ್ಟರ್‌ಗಳಾಗಬೇಕೆಂದರೆ ಪಾಕಶಾಸ್ತ್ರದಲ್ಲಿ ಡಿಗ್ರಿ ಪಡೆದಿರಬೇಕು. ಕೇವಲ ನಿಷ್ಪಕ್ಷಪಾತಿ ಆಗಿದ್ದರಷ್ಟೇ ಮುಗಿಯಲಿಲ್ಲ. ಅವರಿಗೆ ತಮ್ಮ ವೈಯಕ್ತಿಕ ಆಹಾರದ ಆದ್ಯತೆಗಳನ್ನು ಬದಿಗಿಟ್ಟು ರುಚಿ ನೋಡುವುದು ಗೊತ್ತಿರಬೇಕು.

ಕೆಲವರಿಗೆ ಸಿಹಿ ಇಷ್ಟ, ಇನ್ನು ಕೆಲವರಿಗೆ ಖಾರ, ಕಹಿ, ಹುಳಿ. ಆದರೆ ಅದೆಲ್ಲವನ್ನೂ ಮೀರಿ ವಸ್ತುನಿಷ್ಠವಾಗಿ ನಿರ್ಣಯಿಸುವ ಸಾಮರ್ಥ್ಯ, ಸೂಕ್ಷ್ಮತೆ ಇರಬೇಕು. ಅಲ್ಲಿನ ಸೇವೆ, ಎ.ಸಿ. ವ್ಯವಸ್ಥೆ, ಉಷ್ಣತೆ ಹೀಗೆ ಎಲ್ಲವನ್ನೂ ಗಮನಿಸಬೇಕು. ಆಹಾರದ ರುಚಿ, ಶುಚಿ ಮತ್ತು ಪ್ರಸ್ತುತಿಯೇ ಮಾನದಂಡವಾದರೂ ವಾತಾವರಣ ಸರಿಯಿರಬೇಕು. ಅವರು ಆಹಾರ ಸೇವಿಸುವಾಗ, ಆ ರೆಸ್ಟೋರೆಂಟಿನ ಒಳಗಡೆ ಯಾವುದೇ ಟಿಪ್ಪಣಿ ಮಾಡಿಕೊಳ್ಳುವಂತಿಲ್ಲ.

ಹೊರ ಬಂದು- ಅದೆಲ್ಲವನ್ನೂ ನೆನಪಿಟ್ಟು ಮಿಷಲಿನ್‌ಗೆ ತಮ್ಮ ವರದಿಯನ್ನು ಸಲ್ಲಿಸಬೇಕು. ಅವರಿಗೆ ಸ್ಥಳೀಯ ಹೊಸ ರೆಸ್ಟೋರೆಂಟುಗಳ ಅರಿವಿರಬೇಕು. ಅಲ್ಲದೆ ಸಾಮಾಜಿಕ ಜಾಲತಾಣ, ಪತ್ರಿಕೆ, ಟಿವಿ, ಜನರ ಪ್ರತಿಕ್ರಿಯೆ ಎಲ್ಲವನ್ನೂ ಅವರು ಗಮನಿಸುತ್ತಿರಬೇಕು.

ಪಕ್ಷಪಾತ, ಭ್ರಷ್ಟಾಚಾರ, ವಶೀಲೀತನ ಇವನ್ನೆಲ್ಲ ಹೊರಗಿಟ್ಟು ಪ್ರಶಸ್ತಿ ಕೊಡುವ ವ್ಯವಸ್ಥೆ ಮಾಡಿ ಕೊಳ್ಳುವುದು ಸುಲಭವಲ್ಲ. ಅದೆಷ್ಟೋ ಸರಕಾರಗಳಿಗೆ ಇದು ಸಾಧ್ಯವಾಗುವುದಿಲ್ಲ. ಅಪಾತ್ರರಿಗೆ ಪ್ರಶಸ್ತಿ ಕೊಟ್ಟರೆ ಪ್ರಶಸ್ತಿಯೇ ಸೋಲುತ್ತದೆ. ಇದನ್ನು ಮಿಷಲಿನ್ ಟೈರ್ ಕಂಪನಿ ಚೆನ್ನಾಗಿ ಅರಿತು- ನಿಷ್ಪಕ್ಷಪಾತ ವ್ಯವಸ್ಥೆಯನ್ನು ನಿರ್ಮಿಸಿಕೊಂಡಿದೆ.

ಹಾಗಾಗಿಯೇ ಯಾರಿಗೆಂದರೆ ಅವರಿಗೆ ಸಿಗುವ ರಾಜ್ಯ ಪ್ರಶಸ್ತಿಯಂತಾಗಿಲ್ಲ ಮಿಷಲಿನ್ ಸ್ಟಾರ್. ಶತಮಾನ ಕಳೆದರೂ ಅದೇ ಪವಿತ್ರತೆಯನ್ನು, ಕಳಂಕರಾಹಿತ್ಯವನ್ನು

> ನಾವು ರೆಸ್ಟೋರೆಂಟ್ ಮತ್ತು ಹೋಟೆಲ್ ಎಂಬೆರಡು ಇಂಗ್ಲಿಷ್ ಶಬ್ದವನ್ನು ಬೇಕಾಬಿಟ್ಟಿ ಬಳಸುತ್ತೇವೆ. ಇವೆರಡೂ ಬೇರೆ ಬೇರೆ. ರೆಸ್ಟೋರೆಂಟ್ ಎಂದರೆ ಹೋಟೆಲ್ ಅಲ್ಲ, ಹೋಟೆಲ್ ಎಂದರೆ ರೆಸ್ಟೋರೆಂಟ್ ಅಲ್ಲ. ರೆಸ್ಟೋರೆಂಟ್- ಆಹಾರ ಮತ್ತು ಪಾನೀಯ ಒದಗಿಸುವ ಜಾಗ, ಖಾನಾವಳಿ. ಹೋಟೆಲ್ ಎಂದರೆ ಅದು ಮುಖ್ಯವಾಗಿ ತಂಗುವ ಪೂರ್ಣ ವ್ಯವಸ್ಥೆ.

ಕಾಪಾಡಿಕೊಂಡು ಬಂದಿದೆ. ಹೇಳಿ ಕೇಳಿ- ಮಿಷಲಿನ್ ಒಂದು ಟೈರ್ ಕಂಪನಿ. ಆದರೂ ಇದೊಂದು ವ್ಯವಸ್ಥೆಯನ್ನು ಅಷ್ಟೇ ಜತನವಾಗಿ, ಕಂಪನಿಯ ಪ್ರತಿಷ್ಠೆಯಾಗಿ ನಡೆಸಿಕೊಂಡು ಬಂದಿರುವುದು ವಿಶೇಷ.

ಮಿಷಲಿನ್ ಸ್ಟಾರ್ (ಒಂದು, ಎರಡು, ಮೂರು) ಅನ್ನು ಯಾವುದೇ ಒಂದು ಖಾನಾವಳಿ ಪಡೆಯಿತು ಎಂದರೆ ಅದರ ಅದೃಷ್ಟ ಖುಲಾಯಿಸಿದಂತೆ. ಸದ್ಯ ಇಡೀ ಪ್ರಪಂಚದಲ್ಲಿ ಮಿಷಲಿನ್ ಸ್ಟಾರ್ (ಒಂದು, ಎರಡು, ಮೂರು) ಪಡೆದಿರುವ ಸುಮಾರು ನಾಲ್ಕು ಸಾವಿರ ರೆಸ್ಟೋರೆಂಟ್‌ಗಳಿವೆ ಅಷ್ಟೆ. ಹೆಚ್ಚಿನವೆಲ್ಲ ಇರುವುದು ಫ್ರಾನ್ಸ್, ಜಪಾನ್, ಸ್ಪೇನ್, ಅಮೆರಿಕ ದೇಶಗಳಲ್ಲಿ. ಅಮೆರಿಕದಲ್ಲಿ ಸುಮಾರು 250.

ಅವುಗಳಲ್ಲಿ ಅದೆಷ್ಟೋ ಭಾರತೀಯ ಆಹಾರದ ರೆಸ್ಟೋರೆಂಟ್‌ಗಳು ಕೂಡ ಇವೆ. ನ್ಯೂಯಾರ್ಕ್‌ನಲ್ಲಿ ಸೆಮ್ಮಾ ಎಂಬ ಹೆಸರಿನ ದಕ್ಷಿಣ ಭಾರತ ರುಚಿಯ ಮಿಷಲಿನ್ ಸ್ಟಾರ್ ರೆಸ್ಟೋರೆಂಟ್ ಬಹಳ ಜನಪ್ರಿಯ. ಅಲ್ಲಿ ಊಟ ಮಾಡಬೇಕೆಂದರೆ ಮುಂಗಡ ಕಾಯ್ದಿರಿಸಬೇಕು. ಅದು ಮಿಷಲಿನ್ ಸಿಂಗಲ್ ಸ್ಟಾರ್. ಅಲ್ಲಿ ಊಟಕ್ಕೆ ಜಾಗ ಸಿಗಲು ಸುಮಾರು ಹದಿನೈದರಿಂದ ಇಪ್ಪತ್ತು ದಿನ ಕಾಯ ಬೇಕು. ಇದು ಮಿಷಲಿನ್ ಸ್ಟಾರ್ ಬಿರುದಿನ ಮಹತ್ವಕ್ಕೆ ಸಾಕ್ಷಿ.

ಮಿಷಲಿನ್ ಸ್ಟಾರ್ ಎಂದರೆ ಅದು ಕೇವಲ ಹೊಟ್ಟೆ ತುಂಬಿಸಿಕೊಳ್ಳುವ ಆಹಾರದ ಜಾಗವಲ್ಲ. ಅಲ್ಲಿ ಆಹಾರವನ್ನು ಸವಿಯುವ ಅನುಭವಕ್ಕೆ ಎಲ್ಲಿಲ್ಲದ ಮಹತ್ವ. ಅಲ್ಲಿ ಆಹಾರವೆಂದರೆ ಅದೊಂದು ಕಲೆ, ಖಾದ್ಯವೇ ಕಲಾಕೃತಿ. ಎಲ್ಲ ಆಹಾರದ ಪ್ರಸ್ತುತಿ ಹೇಗಿರುತ್ತದೆಯೆಂದರೆ ಆಹಾರದೊಳಕ್ಕೆ ಚಮಚ ತೂರಿಸಿದರೆ ಯಾವುದೋ ಒಳ್ಳೆಯ ಪೇಂಟಿಂಗ್‌ಗೆ ಚೂರಿ ತಿವಿದ ಭಾವ.

ಇಲ್ಲಿ ಬಾಣಸಿಗ ರುಚಿಯಾದ ಅಡುಗೆ ಮಾಡಿದರಷ್ಟೇ ಮುಗಿಯಲಿಲ್ಲ, ಅಷ್ಟೇ ಸೃಜನಶೀಲನಾಗಿರ ಬೇಕು. ಎಲ್ಲವೂ ಆಯಾ ಋತುಮಾನದಲ್ಲಿ ಲಭ್ಯವಿರುವ ವಸ್ತುಗಳಿಂದಲೇ ತಯಾರಿಸಿದ್ದಾಗಿರಬೇಕು. ಮಿಷಲಿನ್ ಸ್ಟಾರ್-ಒಮ್ಮೆ ಕೊಟ್ಟು ಸುಮ್ಮನಾಗುವ ಬಿರುದಲ್ಲ. ಮಿಷಲಿನ್ ಪ್ರತಿ ವರ್ಷ ಈ ಪಟ್ಟಿಯನ್ನು ಪರಿಷ್ಕರಿಸುತ್ತದೆ.

ಮಿಷಲಿನ್ ಆಹಾರ ಪರೀಕ್ಷಕರು ಸಾಧ್ಯವಾದಾಗೆಲ್ಲ ಭೇಟಿ ನೀಡಿ ಪರೀಕ್ಷೆ ಮಾಡುತ್ತಲೇ ಇರುತ್ತಾರೆ. ಹೀಗೆ ಪರೀಕ್ಷಿಸುವಾಗ ಆ ಖಾನಾವಳಿಯ ಆಹಾರದ ಗುಣಮಟ್ಟ ತಗ್ಗಿದರೆ, ಕಳಪೆಗೊಂಡರೆ ಮುಖ-ಮೂತಿ ನೋಡದೆ ಪಟ್ಟಿಯಿಂದ ಕೈಬಿಡಲಾಗುತ್ತದೆ. ಮೊದಲು ಮಿಷಲಿನ್ ಸ್ಟಾರ್ ಇತ್ತು, ಈಗಿಲ್ಲ ಎಂದರೆ ಆ ಖಾನಾವಳಿ ಮಾರನೆಯ ದಿನವೇ ಖಾಲಿ ಹೊಡೆಯಲು ಶುರುವಾಗುತ್ತದೆ, ವ್ಯಾಪಾರ ತಗ್ಗುತ್ತದೆ ಇತ್ಯಾದಿ.

ಹಾಗಾಗಿ ಒಮ್ಮೆ ಸಿಕ್ಕ ಪಟ್ಟವನ್ನು ಖಾನಾವಳಿಗಳು ಶತಗತಾಯ ಕಳೆದುಕೊಳ್ಳಬಾರದೆಂದು ಹೆಣಗುತ್ತವೆ. ಈ ಪ್ರಶಸ್ತಿ ಖಾನಾವಳಿಗೆ ನೀಡುವುದಾದರೂ ಅದೆಷ್ಟೋ ಬಾರಿ ಅಲ್ಲಿನ ಮುಖ್ಯ ಬಾಣಸಿಗ ಕೆಲಸ ಬಿಟ್ಟು ಹೋಗುತ್ತಿದ್ದಂತೆ ರುಚಿ ಬದಲಾಗಿ ಆ ರೆಸ್ಟೋರೆಂಟ್‌ಗಳು ಮಿಷಲಿನ್ ಸ್ಟಾರ್ ಬಿರುದನ್ನು ಕಳೆದುಕೊಂಡು ಬಿಡುತ್ತವೆ. ಹಾಗಾಗಿ ಮುಖ್ಯ ಬಾಣಸಿಗನಿಗೆ ಎಲ್ಲಿಲ್ಲದ ಮರ್ಯಾದೆ. ಒಟ್ಟಾರೆ ಮಿಷಲಿನ್ ಸ್ಟಾರ್ ಖಾನಾವಳಿ ಗಳಿಗೆ ಹೋಗಿ ಯಾವುದೇ ದಿನ, ಸಮಯ, ಯಾವ ಆಹಾರ ಸೇವಿಸಿದರೂ ಅದೇ ಗುಣಮಟ್ಟ ಗ್ರಾಹಕನಿಗೆ ಲಭ್ಯವಾಗುತ್ತದೆ ಎಂಬುದು ಪಕ್ಕಾ.

ಮಿಷಲಿನ್ ಕಂಪನಿ ಭಾರತದಲ್ಲಿ ಯಥೇಚ್ಛ ಟೈರ್‌ಗಳನ್ನು ಮಾರಾಟ ಮಾಡುತ್ತದೆ. ಆದರೆ ಮಿಷಲಿನ್ ಸ್ಟಾರ್ ವ್ಯವಸ್ಥೆ ಭಾರತದಲ್ಲಿ ಇನ್ನೂ ತಂದಿಲ್ಲ. ಇಂಥ ಪ್ರಾಮಾಣಿಕ ವ್ಯವಸ್ಥೆಗಳು ವಿದೇಶದ್ದೋ ಸ್ವದೇಶದ್ದೋ ಎನ್ನುವುದು ಮುಖ್ಯವಾಗುವುದಿಲ್ಲ.


ಸಿಂಗಾಪುರದ ಎಂಟಿಆರ್ ಸೇರಿದಂತೆ ಅದೆಷ್ಟೋ ಭಾರತೀಯ ರೆಸ್ಟೋರೆಂಟ್‌ಗಳು ವಿದೇಶದಲ್ಲಿ ಮಿಷಲಿನ್ ಸ್ಟಾರ್ ಮಾನ್ಯತೆಗಳನ್ನು ಪಡೆದಿವೆ. ಹಾಗಿದ್ದೂ ಭಾರತದಲ್ಲಿನ ರೆಸ್ಟೋರೆಂಟ್‌ಗಳಿಗೆ ಈ ಭಾಗ್ಯ ಬಂದಿಲ್ಲ. ಮಿಷಲಿನ್ ಕಂಪನಿಯವರಿಗೆ ಭಾರತದಲ್ಲಿ ಪ್ರಾಮಾಣಿಕ ಇನ್ಸ್‌ಪೆಕ್ಟರ್ ಸಿಗುವುದಿಲ್ಲ ಎಂದು ಯಾರೋ ಕಿವಿ ಊದಿರಬೇಕು, ಕಾರಣ ಗೊತ್ತಿಲ್ಲ...!!

– **ಶಿಶಿರ್** ಹೆಗಡೆ

## ಕನ್ನಡ ಕವನಗಳು

★★★★★★

### ಮನ ಖುಷಿಯಾಗಿ ಇರಲಿ




ಬಯಕೆಗಳು, ಸಿರಿಯಾಗಿ ಇರಲಿ
ಗಂಡ ಹೆಂಡತಿ, ಜೊತೆಯಾಗಿ ಇರಲಿ
ಮಾತಿನ ಮಧ್ಯೆ, ಪ್ರೀತಿ ಇಲ್ಲವೇಕೆ
ಸಂಬಂಧಗಳು, ಸರಿಯಾಗಿ ಇರಲಿ
ತಂದೆ ತಾಯಿಯನ್ನು, ನೋಯಿಸದಿರಿ
ಮನೆಯೆಂದೂ, ಗುಡಿಯಾಗಿ ಇರಲಿ
ಮೌನದ ನಡುವೆ, ಬೆಸುಗೆ ಚೆಂದವು
ಎಂದೂ ಮುತ್ತೇ, ಸವಿಯಾಗಿ ಇರಲಿ
ಸಂತೋಷ ಸಂಭ್ರಮ, ಬದುಕು ಈಶ
ಹಿತವಾಗಿ ಮನ ಖುಷಿಯಾಗಿ ಇರಲಿ

– **ಹಾ ಮ ಸತೀಶ** ಬೆಂಗಳೂರು

### ಬಾಳಿನಲಿ ಸಖ

ಹೊಳೆವ ಕಂಗಳಲ್ಲಿ ಮನವನಿತ್ತೆ ಸಖ
ಬಾಳ ಬೆಸುಗೆಯಲ್ಲಿ ತನುವನಿತ್ತೆ ಸಖ
ಸಪ್ತಪದಿಯ ತುಳಿದು ಹತ್ತಿರವಾದೆನು
ಬಾಹು ಬಂಧನದಲ್ಲೇ ಸುಖವನಿತ್ತೆ ಸಖ
ಸಂಬಂಧಗಳ ನಡುವೆಯೇ ಈಸಬೇಕು
ಜಯಿಸುತಲೇ ನಿನಗೆ ಬದುಕನಿತ್ತೆ ಸಖ
ನ'ಂದ'ಗ'ೋ'ಕ'ುಲದ'ಂತೆ ಸಂಸಾರವಿರಲಿ
ಪ್ರೀತಿಪ್ರೇಮದ ಜೊತೆ ಸವಿಯನಿತ್ತೆ ಸಖ
ಹೊಸದಾದ ಚೈತನ್ಯ ನಮ್ಮಲಿರಲೀ ಈಶ
ಬಾಳಿನಲಿ ನನಸಿರಲು ಮಗುವನಿತ್ತೆ ಸಖ



### ಎಡಬಿಡಂಗಿ

ನಮಗೆ ದುಡ್ಡು ಮಾಡಬೇಕು. ಬೇರೇನಿಲ್ಲ ನಾವು ಶಾಲೆಯೊಳಗೆ ಕುಡಿತ ಕೆಟ್ಟದ್ದು, ಡ್ರಗ್ಸು ಗಾಂಜಾ ಮುಟ್ಟಬಾರದು, ಸಿಗರೇಟ್ ಗುಟ್ಕಗಳ ಹತ್ತಿರ ಹೋಗಲೇ ಬಾರದು ಹೀಗೆ ವಿದ್ಯಾರ್ಥಿಗಳಿಗೆ ಪಾಠ ಮಾಡಿಸುತ್ತೇವೆ. ಅದನ್ನೇ ಅನುಸರಿಸಬೇಕು ಅಂತ ಹೇಳುತ್ತೇವೆ. ನಾವು ಹಾಗೆ ಮಾಡ ಕೂಡದು ಆದರೆ ನಮ್ಮ ಸರಕಾರಕ್ಕೆ ಒಂದಷ್ಟು ಖರ್ಚಾಗುತ್ತಲ್ಲ, ಹಾಗಾಗಿ ರಸ್ತೆ ಬದಿಯಲ್ಲಿ ಕುಡಿತದ ಅಂಗಡಿಗಳನ್ನು ಇನ್ನೂ ಹೆಚ್ಚು ತೆರೆಯುವುದಕ್ಕೆ ಯೋಚನೆ ಮಾಡ್ತಾ ಇದ್ದೇವೆ. ಶಾಲೆಗಳು ಹೇಗೂ ಇರುತ್ತವೆ. ಅದರಿಂದ ನಮಗೇನು ಹಣ ಸಂಪಾದನೆ ಆಗುವುದಿಲ್ಲ. ಹಾಗಾಗಿ ಇನ್ನೊಂದಷ್ಟು ಹೆಚ್ಚು ಕುಡಿತದ ಅಂಗಡಿಗಳನ್ನು ತೆರೆಯಬೇಕು. 24 ಗಂಟೆಯೂ ತೆರೆದಿರುವಂತೆ ಮಾಡಬೇಕು. ಇದು ನಮ್ಮ ತಪ್ಪಲ್ಲ. ಕೆಟ್ಟದ್ದು ಅಂತ ಗೊತ್ತಿದ್ದಾಗಲೂ ಜನ ಬಂದು ಹೋಗ್ತಾರಲ್ಲ ಅದು ಜನರ ತಪ್ಪು. ಅದು ನಮ್ಮದಲ್ಲ ಹಾಗಾಗಿ ನೀವು ಇದರ ಬಗ್ಗೆ ವಿರೋಧ ಮಾಡುವ ಹಾಗಿಲ್ಲ. ನಾವು ಯಾರನ್ನು ಬಂದು ಕುಡಿಯಿರಿ ಅಂತ ಪ್ರೋತ್ಸಾಹಿಸುತ್ತಿಲ್ಲ. ಎಲ್ಲಾ ಕಡೆಗೂ ಅಂಗಡಿಗಳನ್ನು ತೆರೆದಿದ್ದೇವೆ ಅಷ್ಟೇ. ಆದರೆ ನೇರವಾಗಿ ಅಲ್ಲದಿದ್ದರೂ ಜನ ಬರಬೇಕು ಕುಡಿಬೇಕು ಅದರಿಂದಾಗಿ ನಮ್ಮ ರಾಜ್ಯ ಉದ್ದಾರ ಆಗುತ್ತೆ. ನಿಮಗೆ ರಾಜ್ಯ ಉದ್ದಾರ ಆಗಬೇಕು ತಾನೆ. ಹೀಗೆ ಹೇಳುತ್ತಿದ್ದರು ನಾಯಕರಾದ ಎಡಬಿಡಂಗಿ ರಾಯ. ಎಲ್ರೂ ಕೇಳಿ ಚಪ್ಪಾಳೆ ತಟ್ಟುತ್ತಾ ಇದ್ದರು ಯಾರು ಅದನ್ನು ಪ್ರಶ್ನೆ ಮಾಡಲೇ ಇಲ್ಲ.

– **ಧೀರಜ್** ಬೆಳ್ಳಾರೆ



## ಬಾಳೆ ಎಲೆಯಲ್ಲಿ ಊಟ

ಬಾಳೆ ಎಲೆಯಲ್ಲಿ ಊಟ ಮಾಡುವ ಪದ್ಧತಿ ಇತ್ತೀಚೆಗೆ ಒಂದು ರೀತಿಯ ಫ್ಯಾಷನ್ ಆಗಿ ಹೋಗಿದೆ. ಈ ಟ್ರೆಂಡನ್ನು ಅನೇಕ ದರ್ಶಿನಿಗಳು, ಹೋಟೆಲ್‌ಗಳು ತಮ್ಮ ವ್ಯಾಪಾರಿ ಉಪಯೋಗಕ್ಕೆ ಬಳಸಿಕೊಂಡು ಹಣ ಮಾಡುವತ್ತ ಹೆಜ್ಜೆ ಹಾಕಿದ್ದಾರೆ.

ಬಾಳೆ ಎಲೆಯಲ್ಲಿ ಊಟ ಮಾಡುವ ಪದ್ಧತಿ ಭಾರತದಲ್ಲಿ, ಅದರಲ್ಲೂ ದಕ್ಷಿಣ ಭಾರತದಲ್ಲಿ ಅನಾದಿ ಕಾಲದಿಂದಲೂ ನಡೆದು ಬಂದಿದೆ. ಭಾರತ ಮಾತ್ರವಲ್ಲದೆ ಇಂಡೋನೇಷ್ಯಾ, ಸಿಂಗಾಪುರ್, ಮಲೇಷಿಯಾ, ಫಿಲಿಪೈನ್ಸ್, ಮೆಕ್ಸಿಕೋ, ಮಧ್ಯ ಅಮೇರಿಕಾ ಮುಂತಾದ ಅನೇಕ ದೇಶಗಳಲ್ಲೂ ವ್ಯಾಪಕವಾಗಿ ಹರಡಿದೆ.

ಹಾಗಾದರೆ ಬಾಳೆ ಎಲೆಯಲ್ಲಿ ಊಟ ಮಾಡುವುದರಿಂದ ಏನಾದರೂ ಉಪಯೋಗವಿದೆಯೇ? ಖಂಡಿತ ಹೌದು ಎನ್ನುತ್ತಾರೆ ವಿಜ್ಞಾನಿಗಳು. ಅವರುಗಳ ಸಂಶೋಧನೆಯಿಂದ ಸಾಬೀತಾಗಿರುವ ವಿಷಯವನ್ನು ಅರಿಯೋಣ.

ಮೂಲವಾಗಿ ಬಾಳೆ ಎಲೆಯಲ್ಲಿ ಊಟ ಮಾಡುವಾಗ, ಬಿಸಿ ಬಿಸಿ ಪದಾರ್ಥ ಅದರ ಮೇಲೆ ಹಾಕಿದಾಗ ಅದರಿಂದ ಸ್ರವಿಸುವ ಜಿಗುಟಾದ ವಸ್ತು ಆಹಾರದೊಂದಿಗೆ ದೇಹವನ್ನು ಸೇರುತ್ತದೆ. ಈ ಜಿಗುಟಾದ ವಸ್ತುವಿಗೆ ಕ್ಯಾನ್ಸರ್ ಹೆಚ್ಚಿಸುವ ಗ್ರಂಥಿಗಳನ್ನು ನಿಷ್ಕ್ರಿಯೆಗೊಳಿಸುವ ಶಕ್ತಿಯಿದೆ. ಹಾಗಾಗಿ ದೇಹ ಕ್ಯಾನ್ಸರ್‌ಗೆ ತುತ್ತಾಗುವ ಸಂಭವವನ್ನು ತಡೆಯುತ್ತದೆ.

ಬಾಳೆ ಎಲೆಯ ಮೇಲೆ ಬಿಸಿ ಬಿಸಿ ಆಹಾರ ಪದಾರ್ಥಗಳನ್ನು ಬಡಿಸಿದಾಗ, ಬಾಳೆ ಎಲೆಯಲ್ಲಿನ ಆರೋಗ್ಯಕರ ಪೋಷಕಾಂಶಗಳು ಆಹಾರದೊಂದಿಗೆ ಬೆರೆತು, ದೇಹವನ್ನು ಸೇರುತ್ತದೆ. ಇದರಿಂದ ಸಾಮಾನ್ಯವಾಗಿ ದೇಹದಲ್ಲಿ ಕಾಣಿಸಿಕೊಳ್ಳುವ ದದ್ದು, ತುರಿಕೆ, ಕುರು ಮುಂತಾದ ಸಣ್ಣ ಪುಟ್ಟ ದೈಹಿಕ ಕಾಯಿಲೆಗಳು ದೂರವಾಗುತ್ತವೆ.

ಬಾಳೆ ಎಲೆಗಳಲ್ಲಿ ಪಾಲಿಫಿನಾಲ್ ನಂತಹ ಆ್ಯಂಟಿ ಆಕ್ಸಿಡೆಂಟ್‌ಗಳಿಂದ ಸಮೃದ್ಧವಾಗಿದೆ. ಈ ಆ್ಯಂಟಿ ಆಕ್ಸಿಡೆಂಟ್‌ಗಳಲ್ಲಿ ಅತ್ಯಂತ ಉಪಯುಕ್ತವಾದ ಎಪಿಗಲ್ಲೋಕಾಟೆಚಿನ್ ಗಾಲೆಟ್ (ಇಜಿಸಿಜಿ). ಊತ, ತೂಕ ಕಡಿತಗೊಳಿಸಲು ಹಾಗೂ ಇದು ನೈಸರ್ಗಿಕ ಉತ್ಕರ್ಷಣ ನಿರೋಧಕವಾಗಿದೆ. ಮಾನವನ ದೇಹವು ಇದನ್ನು ಸ್ವೀಕರಿಸುವುದರಿಂದ ದೇಹದ ಮೇಲಿನ ಚರ್ಮ ದೀರ್ಘಕಾಲದವರೆವಿಗೂ ಸುಕ್ಕಾಗುವುದನ್ನು ತಡೆಯಲು ಸಹ ಸಹಾಯ ಮಾಡುತ್ತದೆ.

ಬಾಳೇ ಎಲೆಯಲ್ಲಿನ ಕೆಲವು ಪೋಷಕಾಂಶಗಳು ದದ್ದು, ತುರಿಕೆ ಮತ್ತು ಹುಣ್ಣನ್ನು ದೂರಮಾಡುತ್ತದೆ ಎಂದು ಈಗಾಗಲೇ ತಿಳಿದಿದ್ದೇವೆ. ಅಕಸ್ಮಾತ್ ದದ್ದು, ಮೊಡವೆ, ಕುರು ಮುಂತಾದವುಗಳೇನಾದರೂ ಚರ್ಮದ ಮೇಲೆ ಕಾಣಿಸಿಕೊಂಡಲ್ಲಿ, ಬಾಳೆ ಎಲೆ ಮೇಲೆ ತೆಂಗಿನ ಎಣ್ಣೆ ಹಚ್ಚಿ ಬಾಧಿತ ಚರ್ಮದ ಭಾಗಕ್ಕೆ ಕಟ್ಟುವುದರಿಂದ ಶೀಘ್ರ ಗುಣಮುಖವಾಗಲು ಪ್ರೇರೇಪಿಸುತ್ತದೆ.

ಬಾಳೆ ಎಲೆಯನ್ನು ಊಟಕ್ಕೆ ಬಳಸುವ ಸಂಪ್ರದಾಯ ಭಾರತೀಯ ಸಂಸ್ಕೃತಿಯಲ್ಲಿ ಅನಾದಿಕಾಲದಿಂದಲೂ ನಡೆದು ಬಂದಿದೆ. ಅದರಿಂದ ಮಾನವನ ದೇಹಕ್ಕಾಗುವ ಅನುಕೂಲಗಳನ್ನು ಈಗ ವಿಜ್ಞಾನ ಸಾಬೀತು ಮಾಡಿದೆ.

ಕೆಲವೊಂದು ಅಡುಗೆಯ ತಯಾರಿಕೆಯಲ್ಲಿ ಪದಾರ್ಥವನ್ನು ಬಾಳೆ ಎಲೆಯಲ್ಲಿ ಸುತ್ತಿ ಬೇಯಿಸುವುದು ಉಂಟು. ಈ ರೀತಿಯಲ್ಲಿ ತಯಾರಿಸಿದ ಅಡುಗೆಗೆ, ಅದರದೇ ಆದ ವಿಶಿಷ್ಟ ಸುವಾಸನಾ ಪರಿಮಳ ಬಂದಿರುತ್ತದೆ. ದಕ್ಷಿಣ ಭಾರತದ ಅತ್ಯಂತ ಉತ್ಕೃಷ್ಟ ಸಿಹಿ ಭಕ್ಷ್ಯ ಹೋಳಿಗೆ ಮಾಡುವಾಗಲೂ ಬಾಳೆ ಎಲೆಯ ಮೇಲೆ ತಟ್ಟಿ ನಂತರ ಬೇಯಿಸುವುದುಂಟು. ಬಾಳೆ ಎಲೆ ಉಪಯೋಗಿಸಿ ತಯಾರಿಸಿದ ಹೋಳಿಗೆಗೂ, ಪ್ಲಾಸ್ಟಿಕ್ ಹಾಳೆಯ ಮೇಲೆ ತಟ್ಟಿ ತಯಾರಿಸಿದ ಹೋಳಿಗೆಗೂ ರುಚಿಯಲ್ಲಿ ವ್ಯಾತ್ಯಾಸ ಕಂಡು ಬರುವುದನ್ನು ಗಮನಿಸಿರಬಹುದು. ಬಾಳೆ ಎಲೆಯ ಮೇಲೆ ತಟ್ಟಿ ಮಾಡಿದ ಹೋಳಿಗೆಯ ಸ್ವಾದವೇ ಬೇರೆ.

ಊಟಕ್ಕೆ ಬಾಳೆ ಎಲೆಯನ್ನು ಬಳಸಿದ ನಂತರ ಅದನ್ನು ದನಕರುಗಳಿಗೆ ಮೇವಾಗಿ ನೀಡಬಹುದು. ಇದರಿಂದ ಅವುಗಳಿಗೂ ಆಹಾರ ದೊರಕಿದಂತಾಗುತ್ತದೆ ಮತ್ತು ಪ್ಲೇಟುಗಳನ್ನು ತೊಳೆಯಲು ಉಪಯೋಗಿಸುವ ನೀರೂ ಸಹ ಉಳಿತಾಯವಾಗುತ್ತದೆ. ದನಕರುಗಳು ಇಲ್ಲವಾದಲ್ಲಿ ಭೂಮಿಯಲ್ಲಿ ಎಸೆದರೂ ಅದು ಪರಿಸರ ಸ್ನೇಹಿಯಾದ ಕಾರಣ ಉತ್ತಮ ಗೊಬ್ಬರವಾಗುತ್ತದೆ.

ಆಧುನಿಕ ಜಗತ್ತಿನಲ್ಲಿ ಬಳಸಲಾಗುತ್ತಿರುವ ಪ್ಲಾಸ್ಟಿಕ್ ಪ್ಲೇಟುಗಳಾಗಲಿ, ಥರ್ಮೋಕೋಲ್ ಪ್ಲೇಟುಗಳಾಗಲಿ ಉಪಯೋಗಿಸಿದ ನಂತರ ಅದರ ತ್ಯಾಜ್ಯ ವಿಲೇವಾರಿ ಅತ್ಯಂತ ಗಂಭೀರ ಹಾಗೂ ಕಷ್ಟಕರ ಸಮಸ್ಯೆ. ದನಕರುಗಳು ಈ ತ್ಯಾಜ್ಯವನ್ನು ತಿಂದು ಪ್ರಾಣ ಕಳೆದುಕೊಂಡ ಉದಾಹರಣೆ ಸಹ ನಮ್ಮ ಮುಂದಿದೆ. ಹಾಗಾಗಿ ಬಾಳೆ ಎಲೆ ಇದಕ್ಕೆ ಅತ್ಯಂತ ಪರಿಣಾಮಕಾರಿ ಪರ್ಯಾಯ.

ಇತ್ತೀಚಿನ ದಿನಗಳಲ್ಲಿ ಕೇರಳದಲ್ಲಿ ಆಹಾರ ಬಡಿಸಲು ಮತ್ತು ಆಹಾರವನ್ನು ಪ್ಯಾಕ್ ಮಾಡಲು ಸಹ ಬಾಳೆ ಎಲೆಗಳನ್ನು ಬಳಸುವ ಪ್ರಕ್ರಿಯೆ ಪ್ರಾರಂಭವಾಗಿದೆ. ಇದನ್ನೇ ಇತರರೂ ಅನುಸರಿಸಿದರೆ, ಎಲ್ಲಾ ರೀತಿಯಲ್ಲೂ ಮಾನವನ ಆರೋಗ್ಯ ವೃದ್ದಿಸಲು ಹಾಗೂ ಪರಿಸರವನ್ನು ಸ್ವಚ್ಛವಾಗಿಡಲು ಸಹಾಯಕಾರಿ.

ಕೊನೆ ಹನಿ: ಊಟಕ್ಕೆ ಬಾಳೆ ಎಲೆಯನ್ನು ಹಾಕುವಾಗ ಕೆಲವೊಂದು ಪದ್ಧತಿಯನ್ನು ಹಿಂದಿನ ಕಾಲದಿಂದ ರೂಢಿಸಿಕೊಂಡು ಬರಲಾಗಿದೆ. ಅದೇನೆಂದರೆ, ಅಗ್ರವು (ಬಾಳೆ ಎಲೆಯ ತುದಿ) ಬಡಿಸುವವರ ಬಲಕ್ಕೆ, ಊಟಕ್ಕೆ ಕುಳಿತವರ ಎಡಕ್ಕೆ, ಬರುವಂತೆ ಹಾಕಬೇಕೆಂಬುದು. ಈ ಪದ್ಧತಿಯ ಹಿಂದೆ ಏನಾದರೂ ವೈಜ್ಞಾನಿಕ ಕಾರಣವಿದೆಯೇ??? ಎಂದು ಹುಡುಕುವ ಪ್ರಯತ್ನ ಬೇಡ. ಊಟ ಮಾಡುವವರ ಎಡಕ್ಕೆ ಎಲೆಯ ಸಣ್ಣ ಭಾಗ ಇದ್ದಲ್ಲಿ, ಎಲೆ ಕೊನೆಗೆ ಹಾಕುವಂತಹ ಪದಾರ್ಥ, ಉಪ್ಪು, ಉಪ್ಪಿನಕಾಯಿ, ಚಟ್ನಿ, ಬಡಿಸಲು ಸುಗಮ. ಹೆಚ್ಚು ಭುಂಜಿಸುವ ಪದಾರ್ಥಗಳನ್ನು, ಹೆಚ್ಚು ಸ್ಥಳಾವಕಾಶವಿರುವ ಬಲಗಡೆ ಬಡಿಸಿದಲ್ಲಿ, ಬಲದ ಕೈಯಲ್ಲಿ ಊಟ ಮಾಡುವವರಿಗೆ ಅನುಕೂಲವಷ್ಟೇ. ಹೆಚ್ಚು ಜಾಗವಿರುವ ಕಾರಣ ಬಡಿಸಿದ ಪದಾರ್ಥ ನೆಲ ಸೇರುವುದಿಲ್ಲ ಎಂಬುದು ಅಷ್ಟೇ ಸತ್ಯ.



ಆದಷ್ಟು ಬಾಳೆ ಎಲೆಯ ಮೇಲೆ ಬಡಿಸುವ ಆಹಾರವನ್ನು ಸೇವಿಸಿ. ಬಿಸಿ ಬಿಸಿ ಸಾರು ಹರಿದು ಹೋಗಿ ನೆಲ ಸೇರುತ್ತದೆ ಎಂಬ ಕಾರಣಕ್ಕೆ ಬಾಳೆ ಎಲೆಯಲ್ಲಿ ತಿನ್ನುವುದನ್ನು ತ್ಯಜಿಸಬೇಡಿ. ಆರೋಗ್ಯ ವೃದ್ದಿಸಿಕೊಳ್ಳಲು, ಸಣ್ಣ ಪುಟ್ಟ ಕಾಯಿಲೆಯಿಂದ ದೂರವಿರಲು ಇದೊಂದು ಸುಲಭೋಪಾಯ. ಈ ಸಣ್ಣ ಪದ್ಧತಿಯನ್ನು ಆದಷ್ಟೂ ರೂಢಿಸಿಕೊಳ್ಳಿ. ಆರೋಗ್ಯ ವೃದ್ದಿಸಿಕೊಳ್ಳಿ.

ಬಾಳೆ ಎಲೆಯಲ್ಲಿ ಊಟ ಮಾಡಿದರೆ ಅದರಿಂದ ಹಲವಾರು ರೀತಿಯ ಲಾಭಗಳು ಸಿಗುವುದು.

1) ಪ್ಲಾಸ್ಟಿಕ್ ಮತ್ತು ಇತರ ಸಾಮಗ್ರಿಗಳಿಂದ ಮಾಡಿದಂತಹ ಪ್ಲೇಟ್‌ಗಳು ತುಂಬಾ ದುಬಾರಿ. ಇದು ಪರಿಸರಕ್ಕೂ ಒಳ್ಳೆಯದಲ್ಲ.

2) ಸ್ಟೈರೋಫೋಮ್ ಪ್ಲೇಟ್‌ಗಳನ್ನು ಮರುಬಳಕೆ ಮಾಡಬಹುದು. ಆದರೆ ಇದು ಮಣ್ಣಿನಲ್ಲಿ ಕರಗುವುದಿಲ್ಲ ಮತ್ತು ಹಾಗೆ ನೂರಾರು ವರ್ಷಗಳ ಕಾಲ ಉಳಿಯಬಹುದು. ಬಾಳೆಎಲೆಯು ಮಣ್ಣಿನಲ್ಲಿ ಬೇಗನೆ ಕರಗುವುದು.

3) ನಗರ ಪ್ರದೇಶ ಸೇರಿದಂತೆ ಎಲ್ಲಾ ಕಡೆಗಳಲ್ಲೂ ಬಾಳೆ ಎಲೆಯು ಲಭ್ಯವಿದೆ. ಇದು ಹೆಚ್ಚು ದುಬಾರಿ ಕೂಡ ಆಗಿರಲ್ಲ.

4) ಪ್ಲೇಟ್‌ಗಳನ್ನು ದ್ವೇಷಿಸುತ್ತಿದ್ದರೆ ಆಗ ನೀವು ಬಾಳೆ ಎಲೆ ಬಳಕೆ ಮಾಡಿ. ಇದನ್ನು ಬಳಸಿದ ಬಳಿಕ ಬಿಸಾಕಬಹುದು. ಪ್ಲೇಟ್‌ನಂತೆ ನಿಮಗೆ ಅದನ್ನು ಶುಚಿ ಮಾಡಬೇಕಾಗಿಲ್ಲ.

5) ಬಾಳೆ ಎಲೆಯಲ್ಲಿ ಇರುವಂತಹ ನೈಸರ್ಗಿಕ ಮೇಣವು ಇದನ್ನು ವಾಟರ್ ಪ್ರೂಫ್ ಆಗಿ ಮಾಡಿ. ಇದರಿಂದಾಗಿ ಬಾಳೆ ಎಲೆಯು ತುಂಬಾ ಶುಚಿಯಾಗಿರುವುದು ಮತ್ತು ಆಹಾರಕ್ಕೆ ಒಳ್ಳೆಯ ರುಚಿ ನೀಡುವುದು.

6) ಬಾಳೆ ಎಲೆಯಲ್ಲಿ ಊಟ ಬಡಿಸುವುದು ತುಂಬಾ ಸುಲಭ. ಇದನ್ನು ಒಮ್ಮೆ ನೀರಿನಲ್ಲಿ ಒರೆಸಿಕೊಂಡು ಬಳಸಬಹುದು.

7) ಬಾಳೆ ಎಲೆಯಲ್ಲಿನ ಊಟವು ತುಂಬಾ ಆರೋಗ್ಯಕಾರಿ, ಶುಚಿ ಹಾಗೂ ಪೋಷಕಾಂಶಗಳನ್ನು ದೇಹಕ್ಕೆ ನೀಡುವುದು.

### ಹನಿಗಳು ಸಾರ್ ಹನಿಗಳು!

ಕಾರಣವಿದ್ದರೇನೆ
ನೋವು, ನೋವಿದ್ದರೇನೆ
ಬದುಕುವ ಛಲವು
ಬಾಳ್ವೆಯು ಸುಗಮವು!

★★★★★

ವಿಮರ್ಶೆಯಲಿ
ಕವಿ ಬೆಳಗಬೇಕು
ಬಾಡ ಬಾರದು!


★★★★★

ಭಟ್ಟಂಗಿಗಳ
ಬರಹಗಳ ನಡುವೆ
ನಾವಿರುವೆವು!

★★★★★

ಅವ ಇವ
ಪಲಾಯನ ವಾದಿ
ನಾನು ಮಾತ್ರ
ಸುಪರ್
ವೇದಿ
ಎನ್ನುವವರು
ನನ್ನ
ಲೆಕ್ಕದಲ್ಲಿ
ಪಲಾಯನ
ವ್ಯಾಧಿಗಳು!

– **ಹಾ ಮ ಸತೀಶ** ಬೆಂಗಳೂರು



# ಸಾಮಾನ್ಯ ಜ್ಞಾನ ನೀಡಿದರೆ ಕಲಿಕೆಯ ಗುಣಮಟ್ಟ ಹೆಚ್ಚಳ

• ಪ್ರಜೋದಯ ವರದಿ

**ಅರಸೀಕೆರೆ:** ಮಕ್ಕಳಿಗೆ ಪ್ರಾಥಮಿಕ ಹಂತದಲ್ಲಿಯೇ ಸಾಮಾನ್ಯ ಜ್ಞಾನವನ್ನು ನೀಡಿದಾಗ ಮಕ್ಕಳಲ್ಲಿ ಕಲಿಕೆಯ ಗುಣಮಟ್ಟವೂ ಹೆಚ್ಚುತ್ತದೆ ಎಂದು ಕೃಷಿಕ ಹಾಗೂ ಸಂಪನ್ಮೂಲ ವ್ಯಕ್ತಿ ನಿಂಗರಾಜ್ ಅಭಿಪ್ರಾಯಪಟ್ಟರು.

ನಗರದ ಮಾಲೇಕಲ್ ತಿರುಪತಿ ಯಲ್ಲಿರುವ ಶ್ರೀ ಚಂದ್ರಶೇಖರ ಭಾರತಿ ಇಂಟರ್‌ನ್ಯಾಷನಲ್ ಶಾಲಾ ವತಿಯಿಂದ ಹಮ್ಮಿಕೊಂಡಿದ್ದ ಮಕ್ಕಳ ಸಂತೆ ಹಾಗೂ ಆಹಾರ ಮೇಳ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಗರದಲ್ಲಿ ವ್ಯವಹಾರ ವ್ಯವಸಾಯ ಆಹಾರ ಉತ್ಪಾದನೆ ಗ್ರಾಮೀಣ ಪ್ರದೇಶದಲ್ಲಾದರೆ ಅದಕ್ಕೆ ಮಾರುಕಟ್ಟೆಯನ್ನು ನಗರಗಳು ಒದಗಿಸಿಕೊಡುತ್ತದೆ ಆಧುನಿಕ ಬರದಲ್ಲಿ ನಾವು ಹಳೆಯ ವ್ಯವಸಾಯ ಪದ್ಧತಿಯನ್ನು ಮರೆಯುತ್ತಿರುವುದರಿಂದ ಆಹಾರ ಧಾನ್ಯಗಳಲ್ಲಿ ಪೌಷ್ಟಿಕಾಂಶವು ಕಡಿಮೆಯಾಗಲು ಕಾರಣವಾಗುತ್ತದೆ ಎಂದು ಹೇಳಿದರು.



ಸಾವಯವ ಕೃಷಿ ಬಹಳ ಪರಿಹಾರ ಎಂದು ಅಭಿಪ್ರಾಯಪಟ್ಟ ಅವರು ಕೇವಲ ಕೃಷಿಯಲ್ಲಿ ಜೀವನ ಮಾಡುವುದು ಇಂದಿನ ಪರಿಸ್ಥಿತಿಯಲ್ಲಿ ಕಷ್ಟವಿದೆ ಹೈನುಗಾರಿಕೆಯನ್ನು ಅಳವಡಿಸಿಕೊಳ್ಳಬೇಕು ಎಂದ ಅವರು ಶಾಲೆಯಲ್ಲಿ ಆಹಾರ ಮೇಳ ಮತ್ತು ಮಕ್ಕಳ ಸಂತೆಯನ್ನು ಆಯೋಜಿಸಿದ್ದೀರಿ, ಇದರಿಂದ ಮಕ್ಕಳ ಜ್ಞಾನಾರ್ಜನೆ ಮತ್ತು ವ್ಯವಹಾರಿಕ ಜ್ಞಾನವನ್ನು ಅವರು ತಿಳಿಯುತ್ತಾರೆ. ವಿದ್ಯಾರ್ಥಿಗಳ ಕಲಿಕೆಯ ಬಗ್ಗೆ ಹೆಚ್ಚು ಕಾಳಜಿಯನ್ನು ಈ ಬೋಧಕ ವರ್ಗ ಹೊಂದಿರುವುದು ಮಕ್ಕಳ ಭವಿಷ್ಯಕ್ಕೆ ಸಹಕಾರಿಯಾಗುತ್ತಿದೆ ಎಂದು ಅವರು ಅಭಿಪ್ರಾಯಪಟ್ಟರು

ದುಮ್ಮೇನಹಳ್ಳಿ ಸೋಮಶೇಖರ್ ಅವರು ಮಾತನಾಡಿ, ವಿದ್ಯಾರ್ಥಿಗಳು ಶಿಕ್ಷಣದೊಂದಿಗೆ ಸಾಮಾನ್ಯ ಜ್ಞಾನವನ್ನು ವ್ಯಾವಹಾರಿಕ ಜ್ಞಾನವನ್ನು ಪಡೆಯುವುದು ಬಹಳ ಮುಖ್ಯ. ವ್ಯವಹಾರಿಕ ಜ್ಞಾನವಿಲ್ಲದಿದ್ದಲ್ಲಿ ಶಿಕ್ಷಣ ಇದ್ದು ಹೆಚ್ಚು ಉಪಯೋಗಕ್ಕೆ ಬಾರದು, ಸಾಮಾನ್ಯ ಜ್ಞಾನ ಶಿಕ್ಷಣದ ಒಂದು ಭಾಗ. ಆ ನಿಟ್ಟಿನಲ್ಲಿ ಈ ಶಾಲೆ ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾದಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಹಲವು ಅವಕಾಶಗಳನ್ನು ಕಲ್ಪಿಸಿಕೊಡುತ್ತಾ ಬಂದಿದ್ದಾರೆ, ಶಿಕ್ಷಕ ವರ್ಗ ಬಹಳ ಕಾಳಜಿಯನ್ನು ವಹಿಸಿದೆ ಎಂದು ಶ್ಲಾಘಿಸಿದರು.

ಪ್ರಾಂಶುಪಾಲರಾದ ಆಶಾ ಮಾತನಾಡಿ, ಪೂರಕವಾದಂತ ಚಟುವಟಿಕೆಗಳನ್ನು ನಮ್ಮ ಶಾಲೆಯಲ್ಲಿ ಮಾಡಿಸುತ್ತಾ ಬಂದಿದ್ದೇವೆ. ಇಂದು ಆಹಾರದ ಬಗ್ಗೆ ಹೆಚ್ಚಿನ ಜಾಗೃತಿ ಮೂಡಿಸುವ ಅಗತ್ಯವಿದೆ ರಸ್ತೆ ಬದಿ ಬೇರಡೆ ಆಹಾರವನ್ನು ಖರೀದಿಸುವಾಗ ನಾವು ಗಮನಿಸಬೇಕಾದ ಅಂಶಗಳು ಯಾವುವು..? ಸ್ವಚ್ಛತೆ ನೈರ್ಮಲ್ಯ ವಸ್ತುವಿನ ಮೌಲ್ಯ ಮೊದಲಾದವನ್ನು ಗಮನಿಸಬೇಕಾಗುತ್ತದೆ ಎಂಬುದನ್ನು ಚಟುವಟಿಕೆಯ ಮೂಲಕ ಅವರಿಗೆ ಮನವರಿಕೆ ಮಾಡಿ ಕೊಡುವಂತಹ ಯತ್ನ ಹಾಗೂ ವ್ಯವಹರಿಸಬೇಕಾದರೆ ಸಂಯಮ ತಾಳ್ಮೆ ಜಾಣ್ಮೆ ಮತ್ತು ಹಣದ ಮೌಲ್ಯ ಅರಿಯಲು ಆಹಾರ ಮೇಳ ಮತ್ತು ಮಕ್ಕಳ ಸಂತೆ ಸಹಕಾರಿಯಾಗುತ್ತದೆ. ಪೋಷಕರು ಶಾಲೆಯ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವ ಮೂಲಕ ಶಾಲೆಯನ್ನು ಪ್ರೋತ್ಸಾಹಿಸುತ್ತಾ ಬಂದಿದ್ದಾರೆ. ನಾವು ಪೋಷಕರಿಗೂ ಆಭಾರಿಯಾಗಿದ್ದೇವೆ. ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಸ್ಟಾಲ್‌ಗಳನ್ನು ಹಾಕಿದ್ದಾರೆ. ವಿವಿಧ ತಿನಿಸು ತರಕಾರಿ ಮೊದಲಾದವನ್ನು ಮಾರಾಟಕ್ಕೆ ತಂದಿದ್ದಾರೆ. ನಾವು ಹಮ್ಮಿಕೊಳ್ಳುವ ಯಾವುದೇ ಕಾರ್ಯಕ್ರಮಕ್ಕೆ ಸಂಸ್ಥೆ ಸಹಕಾರ ನೀಡುತ್ತಿರುವುದನ್ನು ನಾವು ಇಲ್ಲಿ ನೆನಪಿಸಿಕೊಳ್ಳುತ್ತೇವೆ ಎಂದು ಅವರು ಹೇಳಿದರು.

ಸಾರ್ವಜನಿಕ ಸಂಪರ್ಕ ಅಧಿಕಾರಿ ರೇಖಾ ಇಂದು ನಿರೀಕ್ಷೆಗಿಂತಲೂ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ಸ್ಟಾಲ್‌ಗಳನ್ನು ಹಾಕಿದ್ದಾರೆ. ಪೋಷಕರು ನಮ್ಮ ಕಾರ್ಯಕ್ರಮಕ್ಕೆ ಸ್ಪಂದಿಸಿದ್ದಾರೆ. ನಮ್ಮ ಕಾರ್ಯಕ್ರಮಗಳು ಯಶಸ್ವಿಯಾಗಬೇಕಾದರೆ ಪೋಷಕರ ಸಹಕಾರದಿಂದ ಮಾತ್ರ ಸಾಧ್ಯ. ನಮ್ಮ ಎಲ್ಲಾ ಕಾರ್ಯಕ್ರಮದ ಹಿಂದೆ ಪೋಷಕರ ಸಹಕಾರ ಇರುತ್ತದೆ ಎಂದು ಅವರು ತಿಳಿಸಿದರು.

# ವಿಜೃಂಭಣೆಯಿಂದ ನಡೆದ ಹನುಮೋತ್ಸವ

• ಪ್ರಜೋದಯ ವರದಿ

**ಹೊಳೆನರಸೀಪುರ:** ನಾಗರೀಕರ ಸಹಕಾರದೊಂದಿಗೆ ಯುವಕರು ಹಗಲಿರುಳು ಶ್ರಮಿಸಿದ್ದರ ಸಮ್ಮಿಳಿತವಾಗಿ ಪಟ್ಟಣದಲ್ಲಿ ನಡೆದ ಹನುಮೋತ್ಸವ ವಿಜೃಂಭಣೆಗೆ ಸಾಕ್ಷಿಯಾಯಿತು. ಪಟ್ಟಣದ ಕೋಟೆ ಶ್ರೀಲಕ್ಷ್ಮಿನರಸಿಂಹ ಸ್ವಾಮಿ ದೇವಾಲಯದ ಬಳಿ ಬೆಳಿಗ್ಗೆ 10 ಗಂಟೆಗೆ ಮಂಗಳಾರತಿಯೊಂದಿಗೆ ಪ್ರಾರಂಭವಾಗಿ ಸಂಜೆ 6 ಗಂಟೆಯ ವರೆಗೂ ನಡೆಯಿತು.

ಪಟ್ಟಣದ ಪ್ರಮುಖ ಬೀದಿಗಳಲ್ಲಿ ಹನಮನ, ಶ್ರೀ ನರಸಿಂಹ ಹಾಗೂ ಶ್ರೀರಾಮನ ರಥಗಳೊಂದಿಗೆ ಹತ್ತಾರು ವೇಷಧಾರಿಗಳು, ಚಂಡೆ ಮದ್ದಳೆ, ವಾದ್ಯಗಳೊಂದಿಗೆ ಶೋಭಾಯಾತ್ರೆ ಮೇಳೈಸಿತು. ಡಿಜೆ ಸೌಂಡ್‌ಗೆ ಕುಣಿದು ಕುಪ್ಪಳಿಸಿದ ಯುವಕರು, ಟಪಾಂಗುಚ್ಚಿ ಹಾಕಿದ ಯುವತಿಯರು, ಚಿಕ್ಕ ಮಕ್ಕಳು ಮೆರವಣಿಗೆಯಲ್ಲಿ ಮಸ್ತ್ ಮಜಾ ಮಾಡಿದರು.

ರಾಷ್ಟ್ರ ಪ್ರೇಮ ಹಾಗೂ ಭಕ್ತಿ ಭಾವನೆಗಳ ಒಗ್ಗೂಡುವಿಕೆಗೆ ಹನುಮೋತ್ಸವ ಅಕ್ಷರಶ: ಸಾಕ್ಷಿಯಾಯಿತು. ವರ್ತಕರು ಬಹುತೇಕ ಅಂಗಡಿಗಳನ್ನು ಮುಚ್ಚಿ ಮೆರವಣಿಗೆಯಲ್ಲಿ ಭಾಗಿಯಾದರು. ಕಳೆದ 4 ದಿನಗಳಿಂದ ಬ್ಯಾನರ್‌ಗಳು, ಬಂಟಿಂಗ್‌ಗಳು, ವಿದ್ಯುತ್ ದೀಪಾಲಂಕೃತವಾಗಿ ಪಟ್ಟಣದ ಬೀದಿ, ವೃತ್ತಗಳು ಕಂಗೊಳಿಸಿದ್ದವು. ಪ್ರಮುಖರು, ಮುಖಂಡರು, ನಾನಾ ಸಂಘ, ಸಂಸ್ಥೆಗಳು ಜ್ಯಾತ್ಯಾತೀತವಾಗಿ, ಪಕ್ಷಾತೀತವಾಗಿ ಉತ್ಸವದಲ್ಲಿ ಪಾಲ್ಗೊಂಡಿದ್ದರು. ಯುವಕರು ಹಾಗೂ ಹಿಂದೂಪರ ಸಂಘಟನೆಗಳು ಸಾಕ್ಷಿಭಾವ ಮೆರೆದರು.



ನವೋದಯ ವಿದ್ಯಾಲಯದ ಪ್ರವೇಶ ಪರೀಕ್ಷೆ ಇದ್ದ ಸಲುವಾಗಿ ಪರೀಕ್ಷಾ ಕೇಂದ್ರದ ಬಳಿ ಉತ್ಸವ ನಿಶ್ಯಬ್ದವಾಗಿ ತೆರಳಿದ್ದು ಹೊರತುಪಡಿಸಿ ಉಳಿದಂತೆ ಜೈ ಶ್ರೀರಾಮ್, ಜೈ ಹನುಮಾನ್ ಘೋಷಣೆಗಳು ಮುಗಿಲು ಮುಟ್ಟಿದ್ದವು.

ಉತ್ಸವ ಸಾಗುವ ಮದ್ಯೆ ನಾನಾ ಸಮೂದಾಯ ಮತ್ತು ದೇವಾಲಯಗಳ ಬಳಿ ಪಾನಕ, ಪ್ರಸಾದ ವಿತರಿಸಲಾಯಿತು. ಮದ್ಯಾಹ್ನ ಸಾರ್ವಜನಿಕವಾಗಿ ಅನ್ನಪ್ರಸಾದ ಸಂತೃಪ್ತಿಯಾಗಿ ವಿತರಿಸಲಾಯಿತು. ಆಂಜನೇಯನ ವೇಷಧಾರಿ, ಕರಡಿ ಮುಂತಾದ ವೇಷಧಾರಿಗಳು ಮಕ್ಕಳಿಗೆ ಮುದ ನೀಡಿದವು. ಹಿರಿಯ ನಾಗರೀಕರು ಸಹ ಮೆರವಣಿಗೆಯ ಉದ್ದಕ್ಕೂ ಹೆಜ್ಜೆ ಹಾಕಿ ಭಕ್ತಿಭಾವ ಪ್ರದರ್ಶಿಸಿದರು. ಭಜನೆ, ಕೋಲಾಟ ಪ್ರದರ್ಶಿಸಿದವು.

## ಬೈಕ್ ಅಪಘಾತ: ವ್ಯಕ್ತಿ ಸಾವು

• ಪ್ರಜೋದಯ ವರದಿ

**ಅರಸೀಕೆರೆ:** ರಸ್ತೆಗೆ ಅಡ್ಡಲಾಗಿ ಬಂದ ನಾಯಿಗೆ ಡಿಕ್ಕಿಯಾಗುವುದನ್ನು ತಪ್ಪಿಸಲು ಹೋಗಿ ಬೈಕ್ ನಿಯಂತ್ರಣ ತಪ್ಪಿ ಕೆಳಗೆ ಬಿದ್ದ ವ್ಯಕ್ತಿ ಮೃತಪಟ್ಟಿರುವ ಘಟನೆ ಕಡೂರು-ಬಾಣಾವರ ರಸ್ತೆಯ ಚಿಕ್ಕಾರಹಳ್ಳಿ ಗೇಟ್ ಸಮೀಪ ನಡೆದಿದೆ.

ಹಳೇಬೀಡು ನಿವಾಸಿ ಚನ್ನಬಸಪ್ಪ (55) ಮೃತರು. ಡಿ.12ರಂದು ಬೆಳ್ಳಿಕೆರೆಯಿಂದ ಬಾಣಾವರಕ್ಕೆ ಯಶೋಧ ಅವರೊಂದಿಗೆ ಹೋಗುತ್ತಿದ್ದಾಗ ರಸ್ತೆಗೆ ಏಕಾಏಕಿ ರಸ್ತೆಗೆ ಅಡ್ಡಲಾಗಿ ಬೈಕ್ ಬಂದಿದ್ದರಿಂದ ಸ್ಕಿಡ್ ಆಗಿ ಇಬ್ಬರೂ ಕೆಳಗೆ ಬಿದ್ದಿದ್ದಾರೆ. ತಕ್ಷಣವೇ ಇಬ್ಬರನ್ನು ಕಡೂರು ಆಸ್ಪತ್ರೆಗೆ ದಾಖಲಿಸಲಾಯಿತು. ಚಿಕಿತ್ಸೆಗೆ ಸ್ಪಂದಿಸದೆ ಚನ್ನಬಸಪ್ಪ ಮೃತಪಟ್ಟಿದ್ದಾರೆ. ಬಾಣಾವರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮ್ಯಾಗ್ನೆಟ್ ಶಾಲೆ ನಿರ್ಧಾರ ವಾಪಾಸ್‌ಗೆ ಆಗ್ರಹ

» ಮೊದಲನೇ ಪುಟದಿಂದ

ಪೂರ್ಣ ಪಟ್ಟಿಯನ್ನು ಈಗಾಗಲೇ ಸಿದ್ಧಗೊಳಿಸಲಾಗಿದೆ. ಶಾಲೆಗಳ ಅಭಿವೃದ್ಧಿ ಹೆಸರಲ್ಲಿ ರಾಜ್ಯದ ಜನರನ್ನು ವಂಚಿಸಿ ಬಡ ಮಕ್ಕಳಿಂದ ಶಾಶ್ವತವಾಗಿ ಶಿಕ್ಷಣ ಕಸಿದುಕೊಳ್ಳುವ ಸರ್ಕಾರದ ಘೋರ ಹುನ್ನಾರ ಇದಾಗಿದೆಯೆಂದು ದೂರಿದರು.

ಎ.ಐ.ಡಿ.ಎಸ್.ಒ. ರಾಜ್ಯ ಖಜಾಂಚಿ ಸುಭಾಷ್ ಅವರು ಮಾತನಾಡಿ, ಸಮ್ಮೇಳನದಲ್ಲಿ ಸಾರ್ವಜನಿಕ ಶಿಕ್ಷಣ ಉಳಿಸಬೇಕು ಹಾಗು ಹಾಸನ ವಿಶ್ವವಿದ್ಯಾಲಯ ಉಳಿಸಬೇಕೆಂದು ಎರಡು ಗೊತ್ತುವಳಿ ಮಂಡಿಸಲಾಯಿತು ಎಂದು ಅವರು ಮಾಹಿತಿ ನೀಡಿದರು.

ಸಮ್ಮೇಳನದಲ್ಲಿ ಮುಂದಿನ ಹೋರಾಟದ ರೂಪುರೇಷೆ ನಿರ್ಧರಿಸಲು ಹಾಗು ನಾಯಕತ್ವ ನೀಡಲು ಜಿಲ್ಲೆಯ ನೂತನ ಜಿಲ್ಲಾ ಕೌನ್ಸಿಲ್ ಆಯ್ಕೆ ಮಾಡಲಾಯಿತು.

ಇದೇ ಸಂದರ್ಭದಲ್ಲಿ ಅಧ್ಯಕ್ಷರಾಗಿ ಯು.ಕೆ.ಚೈತ್ರ, ಉಪಾಧ್ಯಕ್ಷರಾಗಿ ಡಿ.ಪಿ. ಅಭಿಷೇಕ್, ಕಾರ್ಯದರ್ಶಿಯಾಗಿ ಸುಷ್ಮಾ, ಜಂಟಿ ಕಾರ್ಯದರ್ಶಿಗಳಾಗಿ ಮಮತಾ, ಪುರುಷೋತ್ತಮ್, ಚಂದ್ರಶೇಖರ್, ಶಾಮಲಾ, ಮೋಹನ್ ರಾಥೋಡ್, ಧನರಾಜ್ ಹಾಗು ಕಾರ್ಯಕಾರಿ ಸಮಿತಿಯಲ್ಲಿ ವಿವಿಧ ಕಾಲೇಜಿನ 31 ಹಾಗು 65 ವಿದ್ಯಾರ್ಥಿಗಳು ಕೌನ್ಸಿಲ್ ಸದಸ್ಯರಾಗಿ ಆಯ್ಕೆಯಾದರು.

# ಕೆರೆಗಳಿಗೆ ನೀರು ತುಂಬಿಸಿದರೆ ರೈತರ ಬದುಕು ಹಸನು

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಕೆರೆ-ಕಟ್ಟೆಗಳಿಗೆ ಏತ ನೀರಾವರಿ ಯೋಜನೆ ಮೂಲಕ ನೀರು ತುಂಬಿಸಿದರೆ ಮಾತ್ರ ರೈತರ ಬದುಕು ಹಸನಾಗಲು ಸಾಧ್ಯ ಎಂದು ಶಾಸಕ ಸಿ.ಎನ್. ಬಾಲಕೃಷ್ಣ ಅವರು ಹೇಳಿದರು.

ತಾಲ್ಲೂಕಿನ ನುಗ್ಗೇಹಳ್ಳಿ ಗ್ರಾಮ ದಲ್ಲಿ ಏತನೀರಾವರಿ ಯೋಜನೆಯಡಿ ತುಂಬಿ ಹರಿಯುತ್ತಿರುವ ಕೆರೆಗೆ ವಿಶೇಷ ಪೂಜೆ ಸಲ್ಲಿಸಿ ಬಾಗಿನ ಅರ್ಪಿಸಿ ಮಾತನಾಡಿ, ರೈತರ ಬದುಕು ಪ್ರಗತಿ ಹೊಂದಿದರೆ ಮಾತ್ರ ದೇಶ ಅಭಿವೃದ್ಧಿ ಕಾಣಲು ಸಾಧ್ಯ. ಕೆರೆ-ಕಟ್ಟೆಗಳು ತುಂಬಿದರೆ ಅಂತರ್ಜಲ ಚೇತರಿಕೆ ಕಾಣಲಿದ್ದು, ಕೊಳವೆ ಬಾವಿಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ನೀರು ಲಭ್ಯವಾಗಲಿದೆ. ಅದರಿಂದ ರೈತರ ಕೃಷಿ ಚಟುವಟಿಕೆ ಇಮ್ಮಡಿಗೊಳ್ಳಲಿದು ಆರ್ಥಿಕವಾಗಿ ರೈತ ವರ್ಗದ ಬದುಕು ಸದೃಢಗೊಳ್ಳಲಿದೆ ಎಂದು ತಿಳಿಸಿದರು.



ಅಂತರ್ಜಲ ತೀವ್ರ ಪ್ರಮಾಣದಲ್ಲಿ ಕುಸಿದು ಕೊಳವೆ ಬಾವಿಗಳು ನೀರಿಲ್ಲದೆ ಬತ್ತಿ ಬರಿದಾಗಿದ್ದವು. ರೈತರ ಆರ್ಥಿಕ ಬೆಳೆಯಾದ ತೆಂಗಿನ ಮರಗಳು ನಾಶವಾಗಿದ್ದು, ರೈತರ ಬದುಕು ನಿಂತ ನೀರಾ ಗಿತ್ತು. ಸದ್ಯ ಏತನೀರಾವರಿ ಯೋಜನೆ ಯನ್ನು ಅನುಷ್ಠಾನಗೊಳಿಸಿ ವ್ಯಾಪ್ತಿಯ ಕೆರೆಗಳಿಗೆ ನೀರು ತುಂಬಿಸಿರುವ ಪರಿಣಾಮ ಈ ಭಾಗದ ರೈತರ ಬದುಕು ಚೇತರಿಕೆ ಕಂಡಿದೆ ಎಂದರು.

ಗ್ರಾಮದ ದೇವಾಲಯ ವ್ಯಾಪ್ತಿಯ ಹಾಗೂ ಕೆಲವು ರಸ್ತೆಗಳನ್ನು ಚರಂಡಿ ಹಾಗೂ ಕಾಂಕ್ರೀಟ್ ವ್ಯವಸ್ಥೆಯೊಂದಿಗೆ ಅಭಿವೃದ್ಧಿಗೊಳಿಸಲಾಗುವುದು. ಅನುದಾನಗಳ ಲಭ್ಯತೆ ಅವಲಂಬಿಸಿಕೊಂಡು ಮತ್ತಷ್ಟು ಕಾಮಗಾರಿಗಳನ್ನು ಕೈಗೊಳ್ಳುವ ಮೂಲಕ ಗ್ರಾಮದ ಸರ್ವತೋಮುಖ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದೆಂದು ಭರವಸೆ ನೀಡಿದರು.

ಪುರವರ್ಗ ಹಿರೇಮಠದ ಶ್ರೀ ಮಹೇಶ್ವರ ಶಿವಾಚಾರ್ಯ ಸ್ವಾಮೀಜಿ ಗಂಗೆ ಪೂಜೆ ಹಾಗೂ ಬಾಗಿನ ಸಮರ್ಪಿಸುವ ಧಾರ್ಮಿಕ ಕಾರ್ಯಕ್ರಮ ನೆರವೇರಿಸಿದರು. ಟಿಎಪಿಸಿಎಂಎಸ್ ನಿರ್ದೇಶಕ ತೋಟಿ ನಾಗರಾಜ್, ಎಪಿಎಂಸಿ ಮಾಜಿ ಅಧ್ಯಕ್ಷ ದೊರೆಸ್ವಾಮಿ, ಗ್ರಾಪಂ ಅಧ್ಯಕ್ಷ ನಟರಾಜ್ ಇನ್ನಿತರರಿದ್ದರು.

# ಶಿರಾಡಿ ಘಾಟ್‌ನಲ್ಲಿ ಸುರಂಗ ಮಾರ್ಗ

## ಕೇಂದ್ರಕ್ಕೆ ನಿರಪೇಕ್ಷಣಾ ಪತ್ರ ಸಲ್ಲಿಕೆ

» ಮೊದಲನೇ ಪುಟದಿಂದ

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ತಿಳಿಸಿದ್ದಾರೆ. ಹೀಗಾಗಿ ಕೇಂದ್ರದ ನಿರ್ಧಾರದತ್ತ ಎಲ್ಲರ ಚಿತ್ತವಿದೆ.

**ಯೋಜನೆ ವಿವರ:** ಸಕಲೇಶಪುರ ತಾಲ್ಲೂಕಿನ ಮಾರನಹಳ್ಳಿಯಿಂದ ಪ್ರಾರಂಭವಾಗಿ ಅಡ್ಡಹೊಳೆ ವರೆಗೆ ಸುರಂಗ ಮಾರ್ಗ ನಿರ್ಮಾಣವಾಗಲಿದೆ. ಅದರಲ್ಲಿ 23.63 ಕಿ.ಮೀ. ಮಾರ್ಗದಲ್ಲಿ 12.60 ಕಿ.ಮೀ. ಉದ್ದದ 6 ಸುರಂಗ ಮತ್ತು 10 ಸೇತುವೆ ನಿರ್ಮಾಣದ ಪ್ರಸ್ತಾವನೆ ಇದೆ. 10 ಕಿ.ಮೀ ವಯಡಕ್ಟ್ ಇರಲಿದೆ ಎನ್ನಲಾಗಿದೆ. ಬೃಹತ್ ಯೋಜನೆಗೆ ಜಪಾನ್ ಇಂಟರ್‌ನ್ಯಾಷನಲ್ ಕೋ-ಆಪರೇಷನ್ ಏಜೆನ್ಸಿ ನೆರವು ನೀಡುತ್ತಿದೆ ಎಂದು ಆರಂಭದಲ್ಲಿ ಹೇಳಲಾಗಿತ್ತು. ಈ ಮಾರ್ಗದಲ್ಲಿ ದ್ವಿಮುಖ ಮಾರ್ಗದಲ್ಲಿ ವಾಹನಗಳ ಸಂಚಾರಕ್ಕೆ ಅನುವು ಮಾಡುವ ಜೊತೆಗೆ ತುರ್ತು ಸಂದರ್ಭಕ್ಕಾಗಿ 8.58 ಮೀ. ವಿಸ್ತಾರದ ತುರ್ತು ಮಾರ್ಗವೂ ಯೋಜನೆ ಒಳಗೊಂಡಿದೆ.

**ಪ್ರಯಾಣಿಕರಿಗೆ ಅನುಕೂಲ:** ಪಶ್ಚಿಮಘಟ್ಟದ ಭೂಕುಸಿತ ಸಮಸ್ಯೆ ನಿವಾರಣೆಗೆ ಸಹಾಯ. ದಟ್ಟ ಅರಣ್ಯ ಪ್ರದೇಶದಲ್ಲಿ ಆಗಾಗ ಭೂಕುಸಿತ ಉಂಟಾಗುವುದರಿಂದ ಸುಗಮ ಮತ್ತು ಸುರಕ್ಷಿತ ಸಂಚಾರಕ್ಕೆ ಸುರಂಗ ಮಾರ್ಗಗಳು ಅನುಕೂಲವಾಗಲಿವೆ. ಮಂಗಳೂರು ಬಂದರು ಮತ್ತು ದಕ್ಷಿಣ ಕನ್ನಡದ ಧಾರ್ಮಿಕ ಕ್ಷೇತ್ರಗಳ ಸಂಪರ್ಕ ಸುಲಭವಾಗಲಿದೆ. ಹಾಸನ-ಮಂಗಳೂರು ರೈಲು ಮಾರ್ಗದ ನಂತರ, ರಸ್ತೆ ಮಾರ್ಗದಲ್ಲಿ ಇದು ಮೊದಲ, ಒಟ್ಟಾರೆ ಜಿಲ್ಲೆಯ ಎರಡನೇ ಸುರಂಗ ಮಾರ್ಗ ಆಗಲಿದೆ. ವಾಣಿಜ್ಯ ವ್ಯವಹಾರದ ದೃಷ್ಟಿಯಿಂದ ನಿತ್ಯ ನೂರಾರು ಟ್ಯಾಂಕರ್, ಟ್ರಕ್, ಬಸ್ ಮತ್ತಿತರ ವಾಹನ ಸಂಚರಿಸುವುದರಿಂದ ಸಂಚಾರ ದಟ್ಟಣೆ ತಗ್ಗಲಿದೆ.

ಪರಿಸರ ನಾಶ ಆರೋಪ

ಎತ್ತಿನಹೊಳೆ, ರಸ್ತೆ ಸೇರಿ ಅಭಿವೃದ್ಧಿ ಹೆಸರಿನಲ್ಲಿ ಈಗಾಗಲೇ ಪಶ್ಚಿಮಘಟ್ಟ ಅರಣ್ಯ ಪ್ರದೇಶಕ್ಕೆ ಸಾಕಷ್ಟು ಹಾನಿಯಾಗಿದೆ. ಕಣ್ಣೆದುರೇ ಸಮಸ್ಯೆ ಇಟ್ಟುಕೊಂಡು ಸುರಂಗ ಮಾರ್ಗ ಮಾಡಿದರೆ ಅಪಾಯ ಖಂಡಿತ ಎಂಬುದು ಪರಿಸರವಾದಿಗಳ ಆತಂಕದ ವಾದವಾಗಿದೆ.

## ವಿದ್ಯಾರ್ಥಿಗಳ ಅತ್ಯುತ್ತಮ ಸಾಧನೆ



**ಸಕಲೇಶಪುರ: ತಾಲ್ಲೂಕಿನ ಕ್ಯಾಮನಹಳ್ಳಿ ಜ್ಞಾನಜ್ಯೋತಿ ಶಾಲೆಯಲ್ಲಿ ನಡೆದ ತಾಲ್ಲೂಕು ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಯಲ್ಲಿ ಪಟ್ಟಣದ ಆಕ್ಸ್‌ಫರ್ಡ್ ಇಂಗ್ಲಿಷ್ ಶಾಲೆಯ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿ ಶಾಲೆಗೆ ಕೀರ್ತಿ ತಂದಿದ್ದಾರೆ. ಕ್ಲಸ್ಟರ್ ಮಟ್ಟದ ಸ್ಪರ್ಧೆಗಳಲ್ಲಿ ವಿಜೇತರಾಗಿದ್ದ ವಿದ್ಯಾರ್ಥಿಗಳು ತಾಲ್ಲೂಕು ಮಟ್ಟದ ಪ್ರತಿಭಾ ಕಾರಂಜಿ ಸ್ಪರ್ಧೆಗಳಲ್ಲಿ ಭಾಗವಹಿಸಿ, ವಿವಿಧ ವಿಭಾಗಗಳಲ್ಲಿ ಪ್ರಥಮ ಹಾಗೂ ಬಹುಮಾನ ಸ್ಥಾನಗಳನ್ನು ಪಡೆದು ಜಿಲ್ಲಾ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ.**

# ಶಿಕ್ಷಣದ ಜೊತೆಗೆ ವ್ಯವಹಾರ ಜ್ಞಾನವೂ ಅತ್ಯಗತ್ಯ

• ಪ್ರಜೋದಯ ವರದಿ

**ಚನ್ನರಾಯಪಟ್ಟಣ:** ಮಕ್ಕಳಲ್ಲಿ ವ್ಯವಹಾರಿಕ ಜ್ಞಾನ ಬೆಳೆಯಲು ಮಕ್ಕಳ ಸಂತೆಯಂತಹ ಕಾರ್ಯಕ್ರಮಗಳು ಹೆಚ್ಚು ಸಹಕಾರಿಯಾಗಲಿವೆ ಎಂದು ಜ್ಞಾನಪ್ರಭ ಇಂಟನ್ಯಾರ್ಷನಲ್ ಶಾಲೆಯ ಅಧ್ಯಕ್ಷ ಎ.ಜಿ.ಪ್ರಭಾಕರ್ ಅವರು ಹೇಳಿದರು.

ತಾಲ್ಲೂಕಿನ ಹಿರೀಸಾವೆ ಗ್ರಾಮದ ಜ್ಞಾನಪ್ರಭ ಇಂಟರ್‌ನ್ಯಾಷನಲ್ ಶಾಲಾ ಆವರಣದಲ್ಲಿ ಆಯೋಜಿಸಿದ್ದ ಮಕ್ಕಳ ಸಂತೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ, ಭವಿಷ್ಯದಲ್ಲಿ ಬದುಕನ್ನು ಸುಂದರ ಹಾಗೂ ಸುಭದ್ರವಾಗಿ ಕಟ್ಟಿಕೊಳ್ಳಲು ಶಿಕ್ಷಣದ ಜೊತೆಗೆ ವ್ಯವಹಾರಿಕ ಜ್ಞಾನ ಅಗತ್ಯ ಎಂದರು.

ಸರ್ಕಾರಿ ಹಾಗೂ ಖಾಸಗಿಯಾಗಿ ಉನ್ನತ ಹುದ್ದೆಗಳನ್ನು ಹರಸಿ ಶಿಕ್ಷಣ ಪಡೆಯಬಾರದು. ಸಮಾಜದಲ್ಲಿ



ಉತ್ತಮ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವ ಸಲುವಾಗಿ ವಿದ್ಯೆಯನ್ನು ದೀಕ್ಷೆಯಾಗಿ ಸ್ವೀಕರಿಸಬೇಕು. ನಂತರದಲ್ಲಿ ಎಲ್ಲವೂ ತಾನಾಗಿಯೇ ಸಿಗಲಿದೆ ಎಂದು ತಿಳಿಸಿದರು.

ನಿರೀಕ್ಷೆ ಮೀರಿದಂತೆ ಮುಂದುವರಿದು ಬೆಳೆಯುತ್ತಿರುವ ಅತ್ಯಾಧುನಿಕ ಜಗತ್ತಿನಲ್ಲಿ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು ಶಿಕ್ಷಣದ ಜೊತೆಗೆ ವ್ಯವಹಾರ ಜ್ಞಾನವು ಅಗತ್ಯವಾಗಲಿದೆ. ಮೌಲ್ಯಯುತ ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರ ಹಾಗೂ ವ್ಯವಹಾರ ಜ್ಞಾನ ಮುಖ್ಯವಾಗಲಿದ್ದು, ಸ್ವಂತಿಕೆಯಿಂದ ಯಾವುದೇ ಕ್ಷೇತ್ರದಲ್ಲಾದರೂ ತೊಡಗಿಸಿಕೊಂಡು ಎಲ್ಲವನ್ನು ಸಾಧಿಸಬಹುದು ಎಂದು ಸಲಹೆ ನೀಡಿದರು.

ಮಕ್ಕಳ ಸಂತೆಯಲ್ಲಿ ಹಣ್ಣು-ತರಕಾರಿಗಳು, ಸೊಪ್ಪು, ಜ್ಯೂಸ್, ಐಸ್‌ಕ್ರೀಮ್, ಪಾನಿ ಪುರಿ, ಗೋಬಿ, ಕಾಫಿ, ಟೀ ಮತ್ತು ಬಾದಾಮಿ ಹಾಲು, ಸ್ಲಿಪ್ಪರ್, ಮನೆ ಬಳಕೆ ವಸ್ತುಗಳು ಹಾಗೂ ಉತ್ತರ ಕರ್ನಾಟಕ ಶೈಲಿಯ ಉಪಹಾರ ಹಾಗೂ ಊಟ ಸೇರಿದಂತೆ ವಿವಿಧ ವ್ಯಾಪಾರಗಳಲ್ಲಿ ವಿದ್ಯಾರ್ಥಿಗಳು ಉತ್ಸುಕರಾಗಿ ಪಾಲ್ಗೊಂಡಿದ್ದು ಗ್ರಾಹಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ವ್ಯಾಪಾರ ಮಾಡುವ ಮೂಲಕ ಮಕ್ಕಳಿಗೆ ಪ್ರೋತ್ಸಾಹ ನೀಡಿದ್ದು ವಿಶೇಷವಾಗಿತ್ತು.

ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಎ.ಜಿ.ಪ್ರಭಾಕರ್, ಕಾರ್ಯದರ್ಶಿ ಎಂ.ಕೆ. ಹರೀಶ್, ಪ್ರಾಂಶುಪಾಲ ಬಿ.ಸಂಜಯ್ ಕ್ರಿಸ್ಟೋಫರ್, ಜೆಸಿಬಿ ರಾಮು, ಪಾಲಕರು, ವಿದ್ಯಾರ್ಥಿಗಳು ಹಾಗೂ ಇನ್ನಿತರರು ಹಾಜರಿದ್ದರು.

## ಹಾಸನದ ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯದಲ್ಲಿ

ಅಸಲು ದಾವಾ ನಂ.969-2025

| | | |
|---|---|---|
| ವಾದಿ | : | ನಾಗರಾಜು ಮತ್ತು ಇತರರು |
| | | ವಿರುದ್ಧ |
| ಪ್ರತಿವಾದಿಯರು | : | ಕಾರ್ಯದರ್ಶಿಗಳು ಮತ್ತು ಇತರರು |

### ಪತ್ರಿಕಾ ಪ್ರಕಟಣೆ

ಈ ಮೇಲ್ಕಂಡ ದಾವೆಯನ್ನು ವಾದಿಯರು ಪ್ರತಿವಾದಿಯರ ವಿರುದ್ಧ ದಾವಾ 1 ಮತ್ತು 2ನೇ ಅನುಸೂಚಿ ಸ್ವತ್ತುಗಳಲ್ಲಿ ಸಾರ್ವಜನಿಕರು ಮತ್ತು ಗ್ರಾಮಸ್ಥರು ಹಾಗೂ ವಾದಿಯರು ಉಪಯೋಗಿಸುವ ಸಾರ್ವಜನಿಕ ಸ್ವತ್ತೆಂದು ಎಂದು ಘೋಷಣೆ ಮಾಡುವಂತೆ ಕೋರಿ ದಾವೆ ತಂದಿರುತ್ತಾರೆ. ಸದರಿ 1 ಮತ್ತು 2ನೇ ಅನುಸೂಚಿ ಸ್ವತ್ತುಗಳ ಬಗ್ಗೆ ಯಾರಾದರೂ ಹಿತಾಸಕ್ತಿವುಳ್ಳವರು ಮೇಲ್ಕಂಡ ದಾವಾದಲ್ಲಿ ಸೇರ್ಪಡೆಗೊಂಡು ದಾವಾವನ್ನು ನಡೆಸಲು ಇಚ್ಚಿಸುವವರು ದಿನಾಂಕ: 05-01-2026 ರಂದು ಬೆಳಿಗ್ಗೆ 11 ಗಂಟೆಗೆ ತಾವಾಗಲೀ, ತಮ್ಮ ವಕೀಲರ ಮೂಲಕವಾಗಲೀ ಹಾಜರಾಗಿ ಮೇಲ್ಕಂಡ ಕೇಸಿಗೆ ಸಂಬಂಧಿಸಿದಂತೆ ತಮ್ಮ ಅಹವಾಲನ್ನು ಸಲ್ಲಿಸತಕ್ಕದ್ದು.

ನ್ಯಾಯಾಲಯದ ಮೊಹರು ಮತ್ತು ನನ್ನ ಸಹಿಯೊಂದಿಗೆ ದಿನಾಂಕ: 18-12-2025 ರಂದು ನೀಡಲಾಗಿರುತ್ತದೆ.

1) ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ಸಾಲಗಾಮೆ ಹೋಬಳಿ, ಶಂಖ ಗ್ರಾಮದ ಗ್ರಾಮ ಪಂಚಾಯ್ತಿ ಖಾತೆ ನಂ.229, ಹೊಸ ಆಸ್ತಿ ನಂ. 151600602800900415 ರಲ್ಲಿರುವ (ಪೂ.ಪ. 242 ಅಡಿ, ಉ.ದ. 134 ಅಡಿ) ಪೂರ್ವ ಪಶ್ಚಿಮ 42 ಮೀಟರ್, ಉ.ದ. 74 ಮೀಟರ್ ಒಟ್ಟು 3180 ಚದುರ ಮೀಟರ್ ಸ್ವತ್ತಿಗೆ ಚೆಕ್ಕುಬಂದಿ:-

| | | |
|---|---|---|
| ಪೂರ್ವಕ್ಕೆ | : | ನಾಗರಾಜ್ ಮತ್ತು ಬಸಲಿಂಗಪ್ಪರವರ ಜಮೀನು |
| ಪಶ್ಚಿಮಕ್ಕೆ | : | ತಿಮ್ಮಯ್ಯ ಮತ್ತು ದುಬ್ಬೇಗೌಡರ ಜಮೀನು |
| ಉತ್ತರಕ್ಕೆ | : | ಅಕ್ಮಲ್ ಸಾಬ್ ರವರ ಜಮೀನು |
| ದಕ್ಷಿಣಕ್ಕೆ | : | ಸರ್ದಾರ್ ಸಾಹೇಬ್ ರವರ ಜಮೀನು |

2) ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ಸಾಲಗಾಮೆ ಹೋಬಳಿ, ಶಂಖ ಗ್ರಾಮದ ಗ್ರಾಮ ಪಂಚಾಯ್ತಿ ಖಾತೆ ನಂ.230 ಹೊಸ ಆಸ್ತಿ ನಂ.151600602800900416 ರಲ್ಲಿರುವ (ಪೂರ್ವ, ಪಶ್ಚಿಮ 177 ಅಡಿ ಉ.ದ. 150 ಅಡಿ) ಪೂ.ಪ. 54 ಮೀಟರ್, ಉ.ದ.46 ಮೀಟರ್ ಒಟ್ಟು 2484 ಚದರ ಮೀಟರ್‌ವುಳ್ಳ ಸ್ವತ್ತಿಗೆ ಚೆಕ್ಕುಬಂದಿ:-

| | | |
|---|---|---|
| ಪೂರ್ವಕ್ಕೆ | : | ನೀಲಕಂಠಪ್ಪ ರರ ಜಮೀನು |
| ಪಶ್ಚಿಮಕ್ಕೆ | : | ಶಂಖ ಗ್ರಾಮದ ಮುಖ್ಯ ರಸ್ತೆ |
| ಉತ್ತರಕ್ಕೆ | : | ಉಯ್ಯಾಲೆಗೌಡ ರವರ ತೋಟ |
| ದಕ್ಷಿಣಕ್ಕೆ | : | ಅಹಮದ್ ಪಾಷಾ ರವರ ಸ್ವತ್ತು |

ಹಾಸನ
ದಿನಾಂಕ: 25/12/2025
ವಾದಿಯವರ ಪರ ವಕೀಲರು

ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೇದಾರರು
ಹಾಸನದ ಪ್ರಧಾನ ಸಿವಿಲ್ ಜಡ್ಜ್ (ಕಿ.ಇ.)
ನ್ಯಾಯಾಧೀಶರವರ ನ್ಯಾಯಾಲಯ

## ನಾಳೆ ವಿದ್ಯುತ್ ವ್ಯತ್ಯಯ

**ಹಾಸನ:** ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದ ವತಿಯಿಂದ ಡಿ.15 ರಂದು 66/11ಕೆ.ವಿ ದುದ್ದ ವಿದ್ಯುತ್ ವಿತರಣಾ ಕೇಂದ್ರದಲ್ಲಿ 66ಕೆ.ವಿ ಹೊರಾಂಗಣ ಆವರಣದ ವಾಹಕವನ್ನು ಉನ್ನತೀಕರಿಸುವ ಕೆಲಸವನ್ನು ಹಮ್ಮಿಕೊಂಡಿರುವುದರಿಂದ, ಸದರಿ ದಿನಾಂಕದಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 06 ಗಂಟೆಯವರೆಗೆ ದುದ್ದ ವಿ.ವಿ ಕೇಂದ್ರದಿಂದ ಸರಬರಾಜಾಗುವ ನಂದಿಹಳ್ಳಿ, ಆನೇಹಳ್ಳಿ, ಹೆರಗು, ದುದ್ದ, ಗೌಡಗೆರೆ, ಸಂತೆಕೊಪ್ಪಲು, ಪಿ- ಕೋಡಿಹಳ್ಳಿ, ಹೆಚ್-ಮೈಲನಹಳ್ಳಿ, ಕಾರೇಬೋರೆ, ಕಿತ್ತಾನೆಕೆರೆ ಮತ್ತು ಅರಸೀಹಳ್ಳಿ ಮತ್ತು ಸುತ್ತಮುತ್ತಲ ವಿದ್ಯುತ್ ಸ್ಥಾವರಗಳಿಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಕವಿಪ್ರನಿನಿ ಇಂಜಿನಿಯರ್ ತಿಳಿಸಿದ್ದಾರೆ.

# ದ್ವೇಷ ರಾಜಕಾರಣದಿಂದ ಅಭಿವೃದ್ಧಿ ಸಾಧ್ಯವಿಲ್ಲ

• ಪ್ರಜೋದಯ ವರದಿ

**ಸಕಲೇಶಪುರ:** ದ್ವೇಷ ರಾಜಕಾರಣದಿಂದ ಅಭಿವೃದ್ಧಿ ಕುಂಠಿತವಾಗುತ್ತದೆ ಹೊರತು ಕ್ಷೇತ್ರದ ಅಭಿವೃದ್ಧಿ ಸಾಧ್ಯವಿಲ್ಲ ಎಂದು ಪಿಎಲ್‌ಡಿ ಬ್ಯಾಂಕ್ ಉಪಾಧ್ಯಕ್ಷ ಹಾಗೂ ದಲಿತ ಮುಖಂಡ ವಲಳಹಳ್ಳಿ ವೀರೇಶ್ ಆರೋಪಿಸಿದರು.

ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನಪ್ರತಿನಿಧಿಗಳಿಗೆ ಅಭಿವೃದ್ಧಿಯೇ ಮುಖ್ಯವಾಗಬೇಕೆ ಹೊರತು ದ್ವೇಷ ರಾಜಕಾರಣ ಮಾಡಬಾರದು ಎಂದ ಅವರು, ಕುರುಬತ್ತೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೆಳ್ಳೂರು ಗ್ರಾಮದ ಶುಕ್ರವಾರ ಸಂತೆ -ಕೊಡ್ಲಿಪೇಟೆ ಮುಖ್ಯ ರಸ್ತೆಯಿಂದ ಬೆಳ್ಳೂರು ಗ್ರಾಮದವರೆಗೆ ಕಾಂಕ್ರೀಟ್



ರಸ್ತೆ ನಿರ್ಮಾಣಕ್ಕೆ 50 ಲಕ್ಷ ರೂ. ವಿಶೇಷ ಅನುದಾನವನ್ನು ಫೆಬ್ರವರಿ ತಿಂಗಳಲ್ಲಿ ಮುರಳಿ ಮೋಹನ್ ಅವರ ಕೋರಿಕೆಯ ಮೇರೆಗೆ ಸಚಿವ ಪ್ರಿಯಾಂಕ ಖರ್ಗೆ ಅವರು ಮಂಜೂರು ಮಾಡಿದ್ದರು. ಬಳಿಕ ಹಾಸನ ಜಿಲ್ಲಾ ಪಂಚಾಯತ್‌ನಿಂದ ಮೇ ತಿಂಗಳಲ್ಲಿ ಅನುಮೋದನೆ ದೊರೆತಿದೆ. ನಂತರ ಸರ್ಕಾರದ ಆದೇಶ ಸಂಖ್ಯೆ ಗ್ರಾ. ಅವೆ.:252-422 423-229/: 2025 (-1737866) ದಿನಾಂಕ 19-11-2025 ರಂದು ಬಿಡುಗಡೆಯಾಗಿದೆ. ಸರ್ಕಾರವು ಹಣ ಒದಗಿಸಿ ಸುಮಾರು 9 ತಿಂಗಳು ಕಳೆದರೂ ಈವರೆಗೆ ಕಾಮಗಾರಿ ಆರಂಭವಾಗಿಲ್ಲ ಎಂದು ಅವರು ದೂರಿದರು.

ಇದರಿಂದ ಸರ್ಕಾರದ ಆದೇಶ ಹಾಗೂ ಇಲಾಖಾ ನಿಯಮಗಳ ಉಲ್ಲಂಘನೆ ಆಗುತ್ತಿರುವುದಲ್ಲದೆ, ಈ ಭಾಗದ ಜನರ ಅನುಕೂಲಕ್ಕಾಗಿ ನೀಡಿರುವ ಎಸ್‌ಸಿಪಿ ಅನುದಾನವನ್ನು ಬಳಸದೇ ಇರುವುದು ಖಂಡನೀಯವಾಗಿದೆ. ಕಾಮಗಾರಿಯನ್ನು ತಕ್ಷಣ ಆರಂಭಿಸಿ ಜನರಿಗೆ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕೆಂದು ಪದೇಪದೇ ಮನವಿ ಮಾಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ ಎಂದರು.

ಇದೀಗ ಸಕಲೇಶಪುರದ ಮಾನ್ಯ ಶಾಸಕರು ದುರುದ್ದೇಶದಿಂದ ಈ ಕಾಮಗಾರಿಯನ್ನು ಕೈಗೆತ್ತಿಕೊಳ್ಳದಂತೆ ತಡೆಯಲು, ಕಾಮಗಾರಿ ಬದಲಾವಣೆ ಮಾಡುವಂತೆ ಜಿಲ್ಲಾ ಪಂಚಾಯತ್ ಹಾಸನದ ಮುಖ್ಯ ಕಾರ್ಯ ನಿರ್ವಣಾಧಿಕಾರಿಗಳಿಗೆ ಪತ್ರ ಬರೆದಿದ್ದಾರೆ. ಕೇವಲ ಸರ್ಕಾರದಿಂದ ನೇರವಾಗಿ ಗ್ರಾಮಾಭಿವೃದ್ಧಿಗೆ ಬಂದ ಅನುದಾನವನ್ನು ತಡೆಯುವ ಉದ್ದೇಶದಿಂದ ಈ ಕುತಂತ್ರ ನಡೆಸಲಾಗುತ್ತಿದೆ ಎಂದು ಆರೋಪಿಸಿದರು.

ಈ ರಸ್ತೆ ಪಿಎಂ ಜಿಎಸ್‌ವೈ ಯೋಜನೆಯಡಿ ಅನುಮೋದಿತವಾಗಿದೆ ಎಂದು ಹೇಳಲಾಗುತ್ತಿದ್ದರೂ, ವಾಸ್ತವದಲ್ಲಿ ಈ ಕಾಮಗಾರಿ ಇನ್ನೂ ಅನುಮೋದನೆ ಪಡೆದಿಲ್ಲ. ಮಾನ್ಯ ಸಂಸದ ಶ್ರೇಯಸ್ ಪಟೇಲ್ ಅವರ ಸೂಚನೆಯ ಮೇರೆಗೆ ಪಿಎಂ ಅಜಯ್ ಯೋಜನೆಯಡಿ ಹಾಸನ ಜಿಲ್ಲೆಯಲ್ಲಿ ಒಂದೇ ಒಂದು ರಸ್ತೆ ಕಾಮಗಾರಿ ಆಯ್ಕೆಯಾಗಿದೆ. ಈ ಯೋಜನೆಯಡಿ ಒಂದು ರಸ್ತೆ ಅಭಿವೃದ್ಧಿಗೆ ಮಾತ್ರ ಅವಕಾಶವಿದೆ. ಆದರೆ ಈ ಗ್ರಾಮಕ್ಕೆ ಸಂಪರ್ಕಿಸುವ ಎರಡು ರಸ್ತೆಗಳಿದ್ದು, ಈಗಾಗಲೇ ಸರ್ಕಾರ ನೀಡಿರುವ 50 ಲಕ್ಷ ರೂ. ಅನುದಾನವನ್ನು ಮತ್ತೊಂದು ರಸ್ತೆಗೆ ಬಳಸಬಹುದಾಗಿದೆ ಎಂದು ಅವರು ಮಾಹಿತಿ ನೀಡಿದರು.

## ಎನ್‌ಡಿಎ ಸಂಸದರಿಗೆ ಏರ್ಪಡಿಸಿದ್ದ ಔತಣಕೂಟದಲ್ಲಿ ಪ್ರಧಾನಮಂತ್ರಿ ನರೇಂದ್ರ ಮೋದಿ

# ಮತ ಗಳಿಸುವುದು ಮಾತ್ರವಲ್ಲ ಜನರ ಹೃದಯ ಗೆಲ್ಲಬೇಕು

• ಪ್ರಜೋದಯ ವರದಿ

**ನವದೆಹಲಿ:** ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ ಮೂರು ದಿನಗಳಿಂದ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಒಕ್ಕೂಟ ಸಂಸದರನ್ನು ಆಹ್ವಾನಿಸಿ ಅವರ ಜೊತೆ ಚರ್ಚೆ ಮಾತುಕತೆ ನಡೆಸಿ ಯಾವ ರೀತಿ ತಮ್ಮ ಕ್ಷೇತ್ರಗಳಲ್ಲಿ ಕೆಲಸ ಮಾಡಬೇಕು, ಸಾರ್ವಜನಿಕರ ವಿಶ್ವಾಸವನ್ನು ಹೇಗೆ ಗಳಿಸಬೇಕೆಂಬ ಸಲಹೆ ನೀಡುತ್ತಿದ್ದಾರೆ.

ದೆಹಲಿಯ ಸಂಸತ್‌ನಲ್ಲಿರುವ ಪ್ರಧಾನಿಯವರ ಕೊಠಡಿಯಲ್ಲಿ ನಡೆದ ಸಭೆಯಲ್ಲಿ ಅವರು ಸಂಸದರಿಗೆ ತಮ್ಮ ಸಂಪೂರ್ಣ ಬೆಂಬಲವನ್ನು ಭರವಸೆ ನೀಡಿದ್ದಾರೆ. ಪ್ರಧಾನಿಯವರು ಹಲವಾರು ವಿಷಯಗಳ ಬಗ್ಗೆ ಮಾತನಾಡಿದರು, ಸಂಸದರು ಮಾಡುತ್ತಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಜನರೊಂದಿಗೆ ಪರಿಣಾಮಕಾರಿಯಾಗಿ ಸಂವಹನ ನಡೆಸುವಂತೆ ಮತ್ತು ಅವರಿಗೆ ಅರಿವು ಮೂಡಿಸುವಂತೆ ಅಲ್ಲಿರುವ ಎಲ್ಲಾ ಸಂಸದರಿಗೆ ಸಲಹೆ ನೀಡಿದರು ಎಂದು ಹೇಳಿದರು.



**ಸಾರ್ವಜನಿಕರೊಂದಿಗೆ ಉತ್ತಮ ಸಂಪರ್ಕ ಸಾಧಿಸಿ**

ಉತ್ತಮ ಸಾರ್ವಜನಿಕ ಸಂಪರ್ಕಕ್ಕಾಗಿ ಸೋಷಿಯಲ್ ಮೀಡಿಯಾಗಳಲ್ಲಿ ಹೆಚ್ಚು ಸಕ್ರಿಯರಾಗುವಂತೆ ಪ್ರಧಾನಿ ಸಂಸದರನ್ನು ಕೇಳಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿದ್ದು, ಅವರು ಸಂಸದರಿಗೆ ತಮ್ಮ ಸಂಪೂರ್ಣ ಬೆಂಬಲವನ್ನು ಭರವಸೆ ನೀಡಿದರು. ಪ್ರಧಾನಿ ಅವರು ನಮ್ಮೊಂದಿಗೆ ಇರುವುದಾಗಿಯೂ, ನಾವು ಕೆಲಸ ಮಾಡುತ್ತಲೇ ಇರಬೇಕು ಎಂದು ಹೇಳಿದರು ಎಂದು ಎನ್‌ಡಿಎ ಸಂಸದರು ಹೇಳಿದರು.

**ಕರ್ನಾಟಕ ಸಂಸದರೊಂದಿಗೆ ಸಂವಾದ**

ಪ್ರಧಾನಿ ನರೇಂದ್ರ ಮೋದಿ ಅವರು ಕರ್ನಾಟಕದ ಎನ್‌ಡಿಎ ಸಂಸದರನ್ನು ಭೇಟಿಯಾಗಿ, ಕೇಂದ್ರದ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ, ವಿಶೇಷವಾಗಿ ಬಿಜೆಪಿ ಪ್ರಸ್ತುತ ವಿರೋಧ ಪಕ್ಷದಲ್ಲಿರುವ ರಾಜ್ಯದಲ್ಲಿ, ಜನರೊಂದಿಗೆ ತಮ್ಮ ಸಂಬಂಧವನ್ನು ಹೆಚ್ಚಿಸುವಂತೆ, ಜನರೊಡನೆ ಸಂಪರ್ಕ, ಸಂಬಂಧ ಬಲಪಡಿಸುವಂತೆ ಒತ್ತಾಯಿಸಿದರು.

ಪ್ರತಿಯೊಬ್ಬ ಸಂಸದರನ್ನು ತಮ್ಮ ಕ್ಷೇತ್ರಗಳಲ್ಲಿ ನಡೆಯುತ್ತಿರುವ ಕೆಲಸಗಳು ಮತ್ತು ಅವರು ಗಮನಹರಿಸುತ್ತಿರುವ ಪ್ರಮುಖ ಆದ್ಯತೆಗಳ ಬಗ್ಗೆ ಪ್ರತ್ಯೇಕವಾಗಿ ಕೇಳಿದರು. ತಳಮಟ್ಟದ ಸಂಪರ್ಕದ ಮಹತ್ವವನ್ನು ಒತ್ತಿ ಹೇಳಿದ ಪ್ರಧಾನಿ, ಸಂಸದರು ಜನರೊಂದಿಗೆ ನಿಕಟ ಸಂಪರ್ಕ ಹೊಂದಿರಬೇಕು. ಸಾರ್ವಜನಿಕ ಸಮಸ್ಯೆಗಳ ಮೇಲೆ ಸಕ್ರಿಯವಾಗಿ ಕೆಲಸ ಮಾಡಬೇಕು ಎಂದು ಹೇಳಿದರು.

ಸಾಮಾಜಿಕ ಮಾಧ್ಯಮದಲ್ಲಿ ತಮ್ಮ ಉಪಸ್ಥಿತಿಯನ್ನು ಗಮನಾರ್ಹವಾಗಿ ಹೆಚ್ಚಿಸಿಕೊಳ್ಳುವಂತೆಯೂ ಮೋದಿ ಸಂಸದರಿಗೆ ಸಲಹೆ ನೀಡಿದರು. ಇದು ಕ್ಷೇತ್ರ ಉಪಕ್ರಮಗಳು ಮತ್ತು ಕೇಂದ್ರ ಸರ್ಕಾರದ ಯೋಜನೆಗಳ ಪ್ರಭಾವವನ್ನು ಎತ್ತಿ ತೋರಿಸುವ ಸಂವಹನದ ಪರಿಣಾಮಕಾರಿ ಸಾಧನ ಎಂದು ಕರೆದರು.

**ಕರ್ನಾಟಕ ರಾಜಕೀಯ ಪರಿಸ್ಥಿತಿ ಚರ್ಚೆ**

ಸಂಸದರು ರಾಜ್ಯದ ಪ್ರಸ್ತುತ ರಾಜಕೀಯ ಪರಿಸ್ಥಿತಿ ಮತ್ತು ಪಕ್ಷದ ಸಂಘಟನೆಯ ಕಾರ್ಯನಿರ್ವಹಣೆಯ ಬಗ್ಗೆ ಪ್ರಧಾನ ಮಂತ್ರಿಯವರಿಗೆ ತಿಳಿಸಿದರು. ಕೇಂದ್ರ ಯೋಜನೆಗಳ ಪ್ರಯೋಜನಗಳ ಬಗ್ಗೆ ಸಮಾಜದ ಎಲ್ಲಾ ವರ್ಗಗಳ ಜನರಿಗೆ ತಿಳಿಸಲು ಸಮಗ್ರ ಜನ ಸಂಪರ್ಕ ಅಭಿಯಾನದ ಅಗತ್ಯವನ್ನು ಪ್ರಧಾನಿ ಮೋದಿ ಒತ್ತಿ ಹೇಳಿದ್ದಾರೆ ಎಂದು ವರದಿಯಾಗಿದೆ.

ಕೇಂದ್ರ ಸಂಪುಟ ಸಚಿವರಾದ ನಿರ್ಮಲಾ ಸೀತಾರಾಮನ್ ಮತ್ತು ಪ್ರಹ್ಲಾದ್ ಜೋಶಿ, ಹೆಚ್.ಡಿ. ಕುಮಾರ ಸ್ವಾಮಿ, ರಾಜ್ಯ ಸಚಿವರಾದ ಶೋಭಾ ಕರಂದ್ಲಾಜೆ ಮತ್ತು ವಿ.ಸೋಮಣ್ಣ ಮತ್ತು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಕರ್ನಾಟಕದ ಹಲವಾರು ಕೇಂದ್ರ ಸಚಿವರು ಮತ್ತು ಪಕ್ಷದ ಪ್ರಮುಖ ನಾಯಕರು ಸಭೆಯಲ್ಲಿ ಉಪಸ್ಥಿತರಿದ್ದರು.


ಕರ್ನಾಟಕ ಸರ್ಕಾರ

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ

**ಗ್ರಾಮ ಪಂಚಾಯಿತಿ ಕಾರ್ಯಾಲಯ, ಹಂಚೂರು, ಆಲೂರು ತಾಲ್ಲೂಕು.**

ಕ್ರಮ ಸಂಖ್ಯೆ: ಗ್ರಾ.ಪಂ.ಕಾ/ಹಂಚೂರು/ಟೆಂ.ಪ್ರ/2025-26 ದಿನಾಂಕ: 15/10/2025

### ಟೆಂಡರ್ ಪ್ರಕಟಣೆ

ಕರ್ನಾಟಕ ಪಾರದರ್ಶಿಕೆ ಅಧಿನಿಯಮ 1999-2000 ರ ಅನ್ವಯ ಹಂಚೂರು ಗ್ರಾಮ ಪಂಚಾಯಿತಿಗೆ ಈ ಕೆಳಕಂಡ ಸಾಮಗ್ರಿಗಳನ್ನು ಸರಬರಾಜು ಮಾಡಲು ಅಧಿಕೃತ ಸರಬರಾಜುದಾರರಿಂದ ಟೆಂಡರ್ ಅನ್ನು ಆಹ್ವಾನಿಸಲಾಗಿದೆ. ಆಸಕ್ತರು ಪ್ರತಿ ಸರಬರಾಜಿಗೂ ಪ್ರತ್ಯೇಕ ಅರ್ಜಿ ನಮೂನೆಯನ್ನು ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ದಿನಾಂಕ: 17/12/2025 ರಿಂದ 31/12/2025 ರವರೆಗೆ ಕಚೇರಿ ಸಮಯದಲ್ಲಿ ಪಡೆಯಬಹುದಾಗಿದೆ. ಟೆಂಡರ್ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 31/12/2025 ರ ಸಂಜೆ 5.00 ಗಂಟೆ ಆಗಿರುತ್ತದೆ. ಮತ್ತು ಟೆಂಡರ್ ಅನ್ನು ತೆರೆಯುವ ದಿನಾಂಕ: 02/01/2026 ರ ಬೆಳಿಗ್ಗೆ 11.00 ಗಂಟೆ ಆಗಿರುತ್ತದೆ. ಇಎಂಡಿ ಮೊತ್ತಗಳ ಡಿ.ಡಿ./ ಚೆಕ್ ಅನ್ನು ಪಿ.ಡಿ.ಒ/ ಅಧ್ಯಕ್ಷರು ಗ್ರಾ.ಪಂ. ಹಂಚೂರುರವರ ಹೆಸರಿಗೆ ಪಡೆಯುವುದು. ಹೆಚ್ಚಿನ ಮಾಹಿತಿಯನ್ನು ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಪಡೆಯಬಹುದು. ಸರಬರಾಜು ಮಾಡಬೇಕಾದ ಸಾಮಗ್ರಿಗಳ ವಿವರ:-

1) ಕುಡಿಯುವ ನೀರು ಸರಬರಾಜು ಸಾಮಗ್ರಿ, ಬಿಡಿಭಾಗಗಳು ಇಎಂಡಿ ಮೊತ್ತ ರೂ. 12500/-
2) ಬೀದಿ ದೀಪ ಮತ್ತು ಬಿಡಿಭಾಗಗಳ ಸಾಮಗ್ರಿಗಳು ಇಎಂಡಿ ಮೊತ್ತ ರೂ. 12500/-
3) ಸ್ವಚ್ಛತಾ ಸಾಮಗ್ರಿಗಳು ಇಎಂಡಿ ಮೊತ್ತ ರೂ. 12500/-
4) ಕುಡಿಯುವ ನೀರು ಸರಬರಾಜು ಮೋಟಾರ್ ದುರಸ್ಥಿಪಡಿಸಿ ಅಳಡಿಸುವುದು ಇಎಂಡಿ ಮೊತ್ತ ರೂ. 12500/-

★ ಷರತ್ತುಗಳು ಅನ್ವಯಿಸುತ್ತವೆ.

ಸಹಿ/-
ಅಧ್ಯಕ್ಷರು
ಗ್ರಾಮ ಪಂಚಾಯಿತಿ ಹಂಚೂರು.
ಆಲೂರು ತಾಲ್ಲೂಕು.

ಸಹಿ/-
ಉಪಾಧ್ಯಕ್ಷರು
ಗ್ರಾಮ ಪಂಚಾಯಿತಿ, ಹಂಚೂರು
ಆಲೂರು ತಾಲ್ಲೂಕು.

ಸಹಿ/-
ಪಂಚಾಯಿತಿ ಅಭಿವೃದ್ಧಿ ಅಧಿಕಾರಿ
ಗ್ರಾಮ ಪಂಚಾಯಿತಿ, ಹಂಚೂರು
ಆಲೂರು ತಾಲ್ಲೂಕು.


ಪ್ರಜೋದಯ ದಿನಪತ್ರಿಕೆ, ಸಂಪಾದಕ, ಪ್ರಕಾಶಕ ಮತ್ತು ಮುದ್ರಕರು, ಜೆ.ಆರ್.ಕೆಂಚೇಗೌಡ, ಗಂಧದ ಕೋಠಿ ಹಿಂಭಾಗ, ಕೆ.ಆರ್.ಪುರಂ.ಹಾಸನ. ದೂರವಾಣಿ : 08172-231188, ಮೊ: 9449203019

CMYK CMYK CMYK CMYK